ತ್ತದೆ. ಆದ್ದರಿಂದ ಅಂಥಾ ಆವಸರವಾಗಿ ಅವರ ತಲೆ
ಮೇಲೆ ಕುಳಿತುಕೊಂಡು ಈ ಕೂಡಲೇ here and now
ಹಣ ಒದಗಿಸಬೇಕೆಂದು ಹೇಳುತ್ತಿಲ್ಲ. ಇದು ಬಹಳ ಅಗ
ತ್ಯವಾದ ದೇಶದ ಜೀವನಾಡಿ. ಇದನ್ನು ಬೆಳೆಸುವುದ
ರಿಂದ ಮೈಸೂರಿನ ಕೈಗಾರಿಕೆ ಬೆಳೆಯುತ್ತದೆ. ಹಿಂದೆ
ಹೇಳುತ್ತಾ ಇದ್ದಂತೆ, ಪ್ರಥಮ ಪಂಚವಾರ್ಷಿಕ ಯೋಜ
ನೆಯಲ್ಲಿ ವ್ಯವಸಾಯಕ್ಕೆ ಆದ್ಯತೆ ಕೊಡುತ್ತೇವೆ,
ಆಹಾರಕ್ಕೆ ಆದ್ಯತೆ ಕೊಡುತ್ತೇವೆ ಎಂದು ಕೊಟ್ಟರು.
ಅದರ ಫಲ ಏನಾಯಿತು? ಸಾಕಾದಷ್ಟು ಆಗಲಿಲ್ಲ..
ಎರಡನೆಯ ಸಾರಿ ಕೂಡ ಅದನ್ನೇ ಹೇಳಿದರು. ಇಲ್ಲಿ
ನಾವು ಲಕ್ಷಾಂತರ ಎಕರೆಗಳನ್ನು ಸಾಗುವಳಿಗೆ
ತರುವುದಕ್ಕೆ ಇದರ ಅಗತ್ಯ ಬಹಳವಾಗಿದೆ, ಬರೀ
ಶರಾವತಿ ಕಣಿವೆಯಿಂದ ಬರತಕ್ಕ ನೀರಿನ ಸೌಕರ್ಯ
ಮಾತ್ರವಲ್ಲ. ವಿದ್ಯುಚ್ಛಕ್ತಿ ಪ್ರತಿಯೊಂದು ಸರ್ವೇ
ನಂಬರು, ಪ್ರತಿಯೊಂದು ಬಾವಿಗೂ ಕೂಡ ಹೋಗು
ತ್ತದೆ, ಭೂಮಿಯ ತಳದಲ್ಲಿ ಇದ್ದಂಥ ಪಾತಾಳಗಂಗೆ
ಯನ್ನು ಮೇಲಕ್ಕೆ ತರುವಶಕ್ತಿ ಈ ವಿದ್ಯುಚ್ಛಕ್ತಿ.
ಅದನ್ನು ಉಪಯೋಗಿಸಿ ತೋರಿಸುತ್ತಾ ಇದ್ದೇವೆ.
ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮುರು ಈ
ಎರಡು ಮೂರು ತಾಲ್ಲೂಕುಗಳಲ್ಲಿ ಯಾರಾದರೂ ಬಂದು
ನೋಡಿದರೆ ಗೊತ್ತಾಗುತ್ತದೆ. ಪಂಚವಾರ್ಷಿಕ ಯೋಜ
ನೆಗೆ ಸಂಬಂಧಪಟ್ಟ ಶ್ರೀ ರಾಮಮೂರ್ತಿ ಅವರು ಒಂದು
ಸಾರಿ ಬಂದಾಗ ಅಲ್ಲಿರತಕ್ಕ ಬಾವಿಗಳನ್ನು, ಅಲ್ಲಿರತಕ್ಕ
ಅನುಕೂಲತೆಗಳನ್ನು ನೋಡಿ ಅವರು ತಕ್ಷಣ 50 ಲಕ್ಷ
ರೂಪಾಯಿಗಳನ್ನು ಈ ವಿದ್ಯುಚ್ಛಕ್ತಿ ವಸ್ತುವಿನಿಮ
ಯಕ್ಕೆ ನಾನು ಮಂಜೂರು ಮಾಡಿದ್ದೇನೆ ಎಂದು
ಹೇಳಿದರು. ಹೀಗೆ ಮೈಸೂರು ದೇಶದ ವೈಶಿಷ್ಟ್ಯ
ಎಂದರೆ ವಿದ್ಯುಚ್ಛಕ್ತಿ. ಮೈಸೂರು ದೇಶದ ವೈಶಿಷ್ಟ್ಯ
ಎಂದರೆ ಅದರ ನಾಲಾಶಕ್ತಿ, ಮೈಸೂರು ದೇಶದ
ವೈಶಿಷ್ಟ್ಯ ಎಂದರೆ ಅದರ ಬಾವಿಶಕ್ತಿ. ಮೈಸೂರು
ದೇಶದ ವೈಶಿಷ್ಟ್ಯ ಎಂದರೆ ಅದರ ಕೈಗಾರಿಕೆಯ
ಅನುಕೂಲ್ಯ ಹೀಗೆ ಇದ್ದು, ಇದುವರೆಗೂ ನಾವು
ಮಾದರೀ ಮೈಸೂರು ಎಂದು ಅನ್ನಿಸಿಕೊಳ್ಳು
ತ್ತಿದ್ದುದು ಯಾತರಿಂದ ಎಂದರೆ ನಾವು ಉಪಯೋಗಿಸಿ
ದಂಥ ವಿದ್ಯುಚ್ಛಕ್ತಿ, ನಾವು ಉಪಯೋಗಿಸಿದಂಥ ಈ
ಕೈಗಾರಿಕೆಯ ತಯಾರಿಕೆ. ಇದರಿಂದ ದೇಶಕ್ಕೆ
ಹೆಸರು ಬಂದಿದೆ. ಅದನ್ನು ಉಳಿಸುವುದು ಮಾತ್ರವೇ
ಅಲ್ಲ, ಅದನ್ನು ಬೆಳೆಸಬೇಕಾದರೆ ಖಂಡಿತವಾಗಿಯೂ
ಭಾರತಸರ್ಕಾರದವರು ಈ ಸಂದರ್ಭದಲ್ಲಿ ಹಿಂದು
ಮುಂದು ನೋಡದೆ ಸಹಾಯ ಮಾಡಬೇಕು. ಈ
ದಿವಸ ಇಲ್ಲಿಯ ಕೂಗು ದೊಡ್ಡದಾಗಿ ಇದು ಸಿಕ್ಕದಿ
ದ್ದರೆ ನಮ್ಮಲ್ಲಿ ಒಂದು ದುರ್ಭಾವನೆ ಬೆಳೆ
ದೀತು, ಅದಕ್ಕೆ ಅವಕಾಶ ಕೊಡಬೇಡಿ ಈಗಾಗಲೇ
ದಕ್ಷಿಣ ಭಾರತದ ಜನರನ್ನು ಸರಿಯಾಗಿ ನೋಡುತ್ತಿಲ್ಲ
ಎಂಬ ಕೂಗು ಕೇಳುತ್ತಾ ಇದೆ; ಏಕೆಂದರೆ ಅವರಿಗೆ
ಸಾಮೀಪ್ಯ, ಸಾರೂಪ್ಯ ಎಂದು ಮಂತ್ರಿಗಳು ಅವರ
ಹತ್ತಿರ ಇದ್ದರೂ ಅವರು ಕಿವಿಯಲ್ಲಿ ಹೇಳಿದ ಮಾತು
ನಾವು ಕೂಗಿದ ಕೂಗಿಗಿಂತ ಬಹಳ ಸಣ್ಣದಾಗಿ ಕೇಳು
ತ್ತದೆ ಎಂದು ಜನ ಆಡುತ್ತಾ ಇದ್ದಾರೆ. ಇಂಥಾದ್ದಕ್ಕೆ
ಅವಕಾಶ ಕೊಡಬಾರದು. ಹಾಗೇನಾದರೂ ಅವ
ಕಾಶ ಕೊಟ್ಟರೆ ನಾಳೆದಿವಸ ಮೈಸೂರು ದೇಶದಲ್ಲಿ

(ಶ್ರೀ ಎ. ಭೀಮಪ್ಪನಾಯಕ್)

ಒಂದು ಮನೋಭಾವ ಬೆಳೆದು ನಮಗೂ ನಿಮಗೂ ಏನಾದರೂ ವಿರಸ ಬೆಳೆಯುವ ರೀತಿಯಲ್ಲಾದರೆ ಅದಕ್ಕಿಂತಲೂ ದುರದೃಷ್ಟ ಇನ್ನೇನೂ ಆಗಲಾರದು. ಆದ್ದರಿಂದ ಕೇಂದ್ರಸರ್ಕಾರದ ಈ ಯೋಜನಾಧಿಕಾರಿಗಳು ಏನಿದ್ದಾರೆ ಅವರಲ್ಲಿ ಈ ಸಭೆಯ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ, ಇದು ಮೈಸೂರು ದೇಶದ ಜೀವನಾಡಿ, ದೇಹದ ಪ್ರತಿಭಾಗಕ್ಕೆ ಹರಿಯುವ ರಕ್ತನಾಳ, ಈ ರಕ್ತನಾಳವನ್ನು ಕೊಯ್ದುಹಾಕಬೇಡಿ, ಇದರಲ್ಲಿ ಪ್ರಜೆಗಳ ರಕ್ತ ಹರಿಯುತ್ತಿದೆ, ಇದರಿಂದ ಈ ದೇಹ ಬೆಳೆಯುವುದು, ಮೈಸೂರಿನ ಹೆಸರು ಉಳಿಯುವುದಕ್ಕೆ ಇದು ಸಹಾಯಕಾರಿಯಾಗಿದೆ. ಎರಡು ಕೋಟಿ ಜನಸಂಖ್ಯೆ ಇರತಕ್ಕ ಈ ಜನಗಳಿಗೆ ಒಂದೂವರೆ ಕೋಟಿ, ಒಂದು ಮುಕ್ಕಾಲು ಕೋಟಿ ಎಕರೆ ಜಮೀನು ಸಾಗುವಳಿ ಆಗತಕ್ಕ ಸ್ಥಳ ಇದೆ. ಇದರಲ್ಲಿ ಹೆಚ್ಚು ಕಡಮೆ ಅರ್ಧಭಾಗದ ಜನರು ವಿದ್ಯುಚ್ಛಕ್ತಿಯಿಂದಲೇ ತಮ್ಮ ಅನುಕೂಲತೆಗಳನ್ನು ಬೆಳೆಸಿಕೊಳ್ಳಬೇಕಾಗಿದೆ. ಅವರ ಹಾಗೆ ಅತಿವೃಷ್ಟಿ, ಅನಾವೃಷ್ಟಿ ನಮ್ಮಲ್ಲಿ ಹೆಚ್ಚಾಗಿಲ್ಲ. ಸಮತೂಕದ ಮಳೆ ಬೆಳೆ ಬರತಕ್ಕ ಈ ದೇಶದಲ್ಲಿ ವಿದ್ಯುಚ್ಛಕ್ತಿಯ ಅನುಕೂಲತೆಯನ್ನು ಪಡೆದು, ನೀರಾವರಿ ಸೌಕರ್ಯವನ್ನು ಪಡೆದು ತನ್ಮೂಲಕ ನಮ್ಮ ಜನತೆಯ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸೋಣ ಎಂದು ನಾವು ಹೇಳುತ್ತಾ ಇರುವಾಗ, ಪರ್ ಕ್ಯಾಪಿಟಾ ಇನ್‌ಕಂ ಜಾಸ್ತಿ ಮಾಡಬೇಕೆಂದು ಇರುವಾಗ, ಶ್ರೀ ಪುಟ್ಟರಾಮಯ್ಯನವರು ಹೇಳಿದ ಹಾಗೆ, ಮೇಲುಗಡೆ ಇರುವವರ ಉತ್ಪನ್ನವನ್ನು ಕಡಮೆ ಮಾಡಿ ಕೆಳಗಡೆ ಇರತಕ್ಕವರ ಉತ್ಪನ್ನವನ್ನು ಹೆಚ್ಚಿಸಿ ಸಮಾಜದಲ್ಲಿ ಸಮಾನತೆಯನ್ನು ಉಂಟುಮಾಡಬೇಕೆನ್ನುವ ಘೋಷಣೆ ಏನು ? ಇಂಥಾ ಒಂದು ದೇಶವನ್ನೇ ಉದ್ಧಾರಮಾಡತಕ್ಕ ಯೋಜನೆ ವಿಚಾರದಲ್ಲಿ ಕಡೆಗಣ್ಣಿನಿಂದ ನೋಡತಕ್ಕ ಭಾವನೆ ಏನು ? ಇದು ಸಲ್ಲದು. ಆಂಧ್ರದವರು ಗಲಾಟೆಮಾಡಿ, ಕೂಗೆಬ್ಬಿಸಿ ದೇಶದಲ್ಲಿ ಮಾಡಬಾರದ್ದನ್ನು ಮಾಡಿದಾಗ 'ನೀವು ಭೈರವ ಪ್ರಾಜೆಕ್ಟ್ ಬೇಕಾದರೂ ಮಾಡಿಕೊಳ್ಳಿ, ಇನ್ನು ಯಾವ ಪ್ರಾಜೆಕ್ಟ್ ಆದರೂ ಮಾಡಿಕೊಳ್ಳಿ' ಕೊಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿದರು. ಮದರಾಸಿನಲ್ಲಿ ಶ್ರೀ ಕಾಮರಾಜನಾಡಾರವರು "ಅಪ್ಪಡಿ, ಇಪ್ಪಡಿ, ಕುಡುಕ್'ರಿಯೋ, ಇಲ್ಲೆಯೋ" ಎಂದು ಕೇಳಿದರೆ ಕೊಡುತ್ತೇವೆ ಎಂದು ಲಕ್ಷಗಟ್ಟಲೆ ಅವರಿಗೆ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ನಾವು ಹಾಗೆಲ್ಲ ಹೋಗುವುದಿಲ್ಲ, ವಿನಯದಿಂದ ಕೇಳುತ್ತಿದ್ದೇವೆ, ಸೆರಗೊಡ್ಡಿ ಬೇಡಿಕೊಳ್ಳುತ್ತಿದ್ದೇವೆ. ಪರದೇಶದ ಹಣದ ವಿನಿಮಯ ಅಡ್ಡಿ ಬರಬಾರದು, ಆರ್ಥಿಕ ಮುಗ್ಗಟ್ಟು ಅಡ್ಡಿ ಬರಬಾರದು, ಯಾವ ದೃಷ್ಟಿಯಿಂದಲೇ ಆಗಲಿ, ಮೈಸೂರಿಗೆ ಶರಾವತಿ ಯೋಜನೆಯನ್ನು ಕೊಡದೆ ಇದ್ದರೆ ನಮ್ಮ ಜನರಿಗೆ ನಿಮ್ಮಲ್ಲಿ ದುರ್ಭಾವನೆ ಬರುತ್ತದೆ. ಮೈಸೂರು ದೇಶಕ್ಕೆ ಇನ್ನುಮುಂದೆ ಕೇಂದ್ರದಿಂದ ಏನು ಸಹಾಯವೂ ಆಗಲಾರದು ಎನ್ನುವ ಮನೋಭಾವವನ್ನು ಬಿಡಬೇಕು. ಪರದೇಶಗಳಿಂದ, ಜಗತ್ತಿನ ಎಲ್ಲ ಭಾಗಗಳಿಂದ ಜನರು ಬಂದರೆ ಅವರನ್ನು ಮೊದಲು ಮೈಸೂರಿಗೆ ಕರೆದುಕೊಂಡು ತೋರಿಸುವುದಕ್ಕೆ ಬರುತ್ತೀರಿ. ಆ ಜನರೆಲ್ಲ ಅಗಾಧ ಶಕ್ತಿಯುಳ್ಳ ಶರಾವತಿ ವ್ಯಾಲಿ ಪ್ರಾಜೆಕ್ಟ್ ಯೋಜನೆಗೆ ಏಕೆ ಸಹಾಯ ಮಾಡಿಲ್ಲ ? ಮೈಸೂರು ಸರ್ಕಾರದವರು ಈ ವಿಚಾರದಲ್ಲಿ ಹಿಂದೆ ಬಿದ್ದಿಲ್ಲ. ಅವರೂ ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಕೇಳಿದ್ದಾರೆ. ಒತ್ತಾಯಮಾಡಿದ್ದಾರೆ. ಆದರೂ ಕೂಡ ಮಲತಾಯಿಯ ಧೋರಣೆಯನ್ನು ಕೇಂದ್ರ ಸರ್ಕಾರದವರು ಏಕೆ ತೋರಿಸುತ್ತಿದ್ದಾರೆ? ಹಡೆದ ತಾಯಿ ಭಾರತಾಂಬೆ. ಆದರೆ ನಮ್ಮ ದುರದೃಷ್ಟವಶಾತ್ ಮಲತಾಯಿಯೋ ಏನೋ ಎನ್ನುವ ಭಾವನೆ ಬರುತ್ತಿದೆ. ದಯವಿಟ್ಟು ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಯಾವ ಅಡಚಣೆಯೂ ಅಡ್ಡಿ ಬರಬಾರದು. ಆದರಲ್ಲಿಯೂ ಕೂಡ ಇದನ್ನು ತಕ್ಷಣ ಕಾರ್ಯಗತ ಮಾಡಿರಿ ಎನ್ನುವ ಮಾತನ್ನು ಹೇಳಿ ನಮಗೆ ಬೆಂಬಲ ಕೊಟ್ಟರೆ ಕೇಂದ್ರಕ್ಕೆ ಹಣದ ತೊಂದರೆ ತಕ್ಷಣ ಏನು ಬರುತ್ತದೆ? ಇನ್ನು ಒಂದೆರಡು ವರ್ಷಗಳವರೆಗೆ ಈಗಿರತಕ್ಕ ಕಾರ್ಯಗಳನ್ನು ನಡೆಸಿಕೊಂಡು ಹೋಗಬಹುದು. ಕಟ್ಟೆಕಟ್ಟುವುದು, ಜಲಾಶಯದ ಏರ್ಪಾಡು ಇವುಗಳಿಗೆಲ್ಲ ಪರದೇಶದ ಹಣದ ವಿನಿಮಯದ ತೊಂದರೆ ಇಲ್ಲ. ಯಂತ್ರ ಸಾಮಗ್ರಿಗಳ ತೊಂದರೆ ಏನಾದರೂ ಇದ್ದರೆ ಅದನ್ನು ಬಹು ಸುಲಭವಾಗಿ ನಾವು ತಪ್ಪಿಸಬಹುದು. ರಷ್ಯ ದೇಶ ರೂಪಾಯಿ ಮೌಲ್ಯದಲ್ಲಿ ಯಂತ್ರ ಸಾಮಗ್ರಿಗಳನ್ನು ಕೊಡುತ್ತೇವೆಂದು ನಿರ್ಧರ ಮಾಡಿದರೋ ಇಲ್ಲವೋ, ಕೂಡಲೇ ಜಗತ್ತಿನ ಎಲ್ಲ ರಾಷ್ಟ್ರಗಳೂ ಕೂಡ ಇಲ್ಲಿ ಅಕೌಂಟನ್ನು ಓಪನ್ ಮಾಡುತ್ತೇವೆ, ತಮ್ಮ ಯಂತ್ರಗಳನ್ನು ಒದಗಿಸುತ್ತೇವೆ, ರೂಪಾಯಿ ಮೌಲ್ಯದಲ್ಲಿ ಅವುಗಳ ಬೆಲೆಯನ್ನು ಪಡೆಯುತ್ತೇವೆ ಮತ್ತು ಈ ಹಣವನ್ನು ಕಂತುಗಳಲ್ಲಿ ಎಂದರೆ deferred payments ಮೂಲಕ ಪಡೆಯುತ್ತೇವೆಂದು ಹೇಳಿ, ನಮಗೆ ಆರ್ಡರ್ ಮಾತ್ರ ಕೊಡಿ, ನಾವು ಸಾಮಾನುಗಳನ್ನು ಒದಗಿಸಿಕೊಡುತ್ತೇವೆ, ಐದು-ಹತ್ತು ವರ್ಷ ಕಂತುಗಳಲ್ಲಿ ಹಣವನ್ನು ಕೊಡಿ ಎಂದು ಹೇಳುವವರೂ ಇದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಏನಾದರೂ ಹೇಳುವುದು ಸರಿಯಲ್ಲ. ಅನುಪಯೋಗವಾಗಿರುವ ಅನೇಕ ಯೋಜನೆಗಳನ್ನು ಕಟಾಯಿಸಿ ಈ ಯೋಜನೆಗೆ ಹಣವನ್ನೊದಗಿಸಿ ಎಂದು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಸುಮ್ಮನೆ ಹಣ ದುರ್ವ್ಯಯವಾಗುತ್ತಿರುವುದು ನಮಗೆ ಗೊತ್ತು. ಈ ದಿನ ಈ ಸಭೆಯಲ್ಲಿ ಹೇಗೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಭಾಗದ ಹಣ ದುರ್ವ್ಯಯವಾಗುತ್ತಿದೆ ಎಂಬುದನ್ನು ಹೇಳಿದ್ದಾರೆ. ಅಂಥದನ್ನೆಲ್ಲ ಉಳಿಸಿದರೆ ನಮ್ಮ ಶರಾವತಿ ಯೋಜನೆ ಕೈಗೂಡುತ್ತಿತ್ತು. ಈ ದೃಷ್ಟಿಯಿಂದ ಇನ್ನೊಂದುಸಾರಿ ಕೇಂದ್ರದಲ್ಲಿ ಅರಿಕೆ ಮಾಡಿಕೊಳ್ಳಬೇಕು. ಮೊದಲು ಮಾಡಿದಂತೆ ಧೋರಣೆಯನ್ನು ತೋರಿಸಬೇಡಿ, ದಯವಿಟ್ಟು ಸಹಾಯಮಾಡಿ, ಎಂದು ಕೇಳುವುದೇ ಅಲ್ಲದೆ ಇದಕ್ಕೆ ಸಂಬಂಧಪಟ್ಟಂತೆ ಮೈಸೂರು ಸರ್ಕಾರದವರು ಈ ವಿಷಯವನ್ನು ಪ್ಲಾನಿಂಗ್ ಕಮಿಷನ್ ಮುಂದೆ ಒತ್ತಾಯ ಮಾಡುವುದಕ್ಕೆ ಈ ಸಭೆಯ ಎಲ್ಲ ಪಕ್ಷಗಳಿಗೂ ಸಂಬಂಧಪಟ್ಟ ಜನರ ಒಂದು ನಿಯೋಗದವರು ಪ್ಲಾನಿಂಗ್ ಕಮಿಷನ್ ಮುಂದೆಹೋಗಿ ಈ ವಿಷಯವನ್ನು ಒತ್ತಾಯಪಡಿಸಿ ಶರಾವತಿ ಯೋಜನೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಮಾಡಿ ತೃತೀಯ ಯೋಜನೆಯಲ್ಲಿ ಮುಗಿಸುವಂತೆ ಒತ್ತಾಯಪಡಿಸಲು ಅನುಕೂಲವಾಗುವಂತೆ ಏರ್ಪಾಡು ಮಾಡಬೇಕೆಂದು ಮೈಸೂರು ಸರ್ಕಾರವನ್ನು ಈ ಸಭೆಯ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಈ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಸರ್ಕಾರ ಯಾವ information ಕೂಡ ಇದುವರೆಗೂ ನಮಗೆ ಒದಗಿಸಿಲ್ಲ. ಆದರೆ ನಾವು ಯಾವುದೋ ಒಂದು ಮಾರ್ಗದಲ್ಲಿ, ಏನೋ ಒಂದು ಧೋರಣೆಯಲ್ಲಿ ಹೋಗು

ತ್ತಿದ್ದೇವೆ, ಅದು ಸರಿಯೋ ತಪ್ಪೋ ಎನ್ನುವುದನ್ನು ತಿಳಿಯಲು ಅವರು ಸ್ವಲ್ಪ figures ಕೊಟ್ಟಿದ್ದರೆ ಚೆನ್ನಾಗಿತ್ತು........

ಅಧ್ಯಕ್ಷರು.—ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಮಂತ್ರಿಗಳು ಮಾತನಾಡುವಾಗ ವಿಷಯಗಳನ್ನು ಹೇಳಬಹುದು. ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

Sri K. PUTTASWAMY (Mysore).—It is unfortunate that I am unable to catch the eye of Speaker.

Sri J. VENKATAPPA (Sidlaghatta).—How long we will sit today, Sir?

Mr. SPEAKER.—We will be sitting up to 7 o'clock.

Sri K. PUTTASWAMY.—I am sorry I did not catch the eye of the Speaker. I wanted to tell the Speaker that there is an important Select Committee Meeting at 6 P.M. and I am anxious to hear the reply of the mover and the Minister. My humble submission is that we should not be deprived of the opportunity.

Mr. SPEAKER.—We will try to adjust.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಬಾಯಿಮಾತಿನಲ್ಲಿ ಭಾರತಮಾತೆ ಎಂದು ಹೇಳಿ, ನಮ್ಮ ನಾಯಕರು ಇಲ್ಲಿಂದ ದೆಹಲಿಯವರೆಗೂ ಎಲ್ಲ ಒಂದೇ ರಾಜ್ಯ ಎಂದು ಹೇಳಿ, ತಮ್ಮ ತಮ್ಮವರಿಗೆ, ತಮಗೆ ಬೇಕಾದವರಿಗೆ ಏನಾದರೂ ಮಾಡಬೇಕೆನ್ನುವ ಸಂಕುಚಿತ ಮನೋಭಾವನೆಯನ್ನು ಸುಮಾರು ಹನ್ನೊಂದು ವರ್ಷಗಳಿಂದಲೂ ತಾಳಿ, ಜನತೆಯನ್ನು ಇವೊತ್ತು ಅನ್ನಕ್ಷಾಮ, ವಿದ್ಯುತ್‌ಕ್ಷಾಮಕ್ಕೆ ಈಡು ಮಾಡಿ, ಸಂಕಟಬಂದಾಗ ವೆಂಕಟರಮಣ ಎಂಬಂತೆ ಇವೊತ್ತು ಒಂದು ನಿರ್ಣಯವನ್ನು ತಂದು ವಿರೋಧ ಪಕ್ಷದ ಮತ್ತು ದೇಶದ ಜನತೆಯ ಬೆಂಬಲವನ್ನು ಕೋರಿರುವುದನ್ನು ನೋಡಿ ನನಗೆ ತುಂಬ ವ್ಯಥೆಯಾಗಿದೆ. ಸರ್ಕಾರ ಈ ಕೆಲಸವನ್ನು ಮೊದಲು ಮಾಡಬೇಕಾಗಿತ್ತು. ಈಗ ಸಂಕಟಪಡುವ ಬದಲು ಹಿಂದೆಯೇ ಕೇಂದ್ರ ಸರ್ಕಾರದವರು ನಮ್ಮ ಮನವಿಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ, ಇದಕ್ಕೆ ಎಲ್ಲರ ಸಹಕಾರ ಬೇಕು ಎಂದು ದೇಶದ ಜನತೆಯ ಸಹಕಾರವನ್ನು ಕೇಳಿದ್ದರೆ ಬಹಳ ಚೆನ್ನಾಗಿತ್ತು. ಹಾಗೆಮಾಡದೆ ಮುಪ್ಪಿನಲ್ಲಿ ವೇದಹೇಳುವುದಕ್ಕೆ ಆರಂಭಿಸಿದಹಾಗೆ ವರ್ತಿಸುತ್ತಿದ್ದಾರೆ.

Sri H. M. CHANNABASAPPA.—I should like to make it clear that this is not a Government Resolution. An Hon'ble Member of this House has brought the resolution and Government cannot prevent it.

4-30 P.M.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದ ನಿರ್ಣಯವೆಂದರೆ, ದೇಶದ ಹಿತದೃಷ್ಟಿಯಿಂದ ಕೂಡಿರಬೇಕು. ಆದರೆ ಈ ರೀತಿ ಆಡಳಿತ ಅಧಿಕಾರದಲ್ಲಿರುವವರು ತಮ್ಮ ದೊಡ್ಡಸ್ತಿಕೆಯನ್ನು ತೋರಿಸುವುದಕ್ಕಾಗಿ, ಗುಟ್ಟಾಗಿ ಈ ರೀತಿಮಾಡಿ ಇಡುವುದು ಒಳ್ಳೆಯದಲ್ಲ. ವಿದ್ಯುಚ್ಛಕ್ತಿಯು ಪೂರೈಕೆಯಾದರೆ, ಯಾರಾದರೂ ಮಂಡಲಸಮಿತಿ ಸದಸ್ಯರು ಪಂಪುಗಳಿಗೆ ನಾಲ್ಕು ಜನರಿಗೆ ವಿದ್ಯುಚ್ಛಕ್ತಿಕೊಡಿ ಎಂದು ಪಬ್ಲಿಕ್‌ವರ್ಕ್ಸ್ ಮಂತ್ರಿಗಳನ್ನು ಕೇಳಬಹುದು, ತಾವು ಅಧಿಕಾರದಲ್ಲಿದ್ದಾಗ ನಾಲ್ಕು ಜನರಿಗೆ ಪಂಪುಗಳು, ವಿದ್ಯುಚ್ಛಕ್ತಿ ಕೊಟ್ಟರೆ ತಮಗೆ ಮುಂದೆ ಅನುಕೂಲವಾಗುತ್ತದೆಂಬ ಮನೋಭಾವ ಅವರಲ್ಲಿದೆಯೋ ಏನೋ ಎಂಬ ಸಂದೇಹ ಬರುತ್ತದೆ. ಈಗ ವಿದ್ಯುಚ್ಛಕ್ತಿಯು ಅಭಾವವಿರುವುದರಿಂದ, ಎರಡು ಪಂಪುಗಳಿಗೆ ಸಿಕ್ಕುತ್ತದೆ, ಇನ್ನೆರಡಕ್ಕೆ ಸಿಕ್ಕುವುದಿಲ್ಲ, ಹೆಚ್ಚಿಗೆ ಇದ್ದಿದ್ದರೆ ಈ ಕೊರತೆಗೆ ಕಾರಣವಿರಲಿಲ್ಲ. ಇಲ್ಲಿ ಸಂಕುಚಿತ ಭಾವನೆ ಹೆಚ್ಚಿದೆ. ಕೇಂದ್ರ ಸರ್ಕಾರಕ್ಕೆ ಹೋಗುವವರೂ ಪಾರ್ಲಿಮೆಂಟಿಗೆ ಹೋಗುವವರೂ ತಾವು ಯಾರಿಗೆ ಸಹಾಯ ಮಾಡಿದರೆ ಅವರು ತಮಗೆ ಎಷ್ಟುಮಟ್ಟಿಗೆ ಸಹಾಯ ಮಾಡಬಹುದು ಎಂದು ಯೋಚಿಸುತ್ತಾರೆ. ಮತ್ತೆ ಕೆಲವರು, ತಾವು ಯಾರ ಬೆಂಬಲದಿಂದ ಇಲ್ಲಿ ಮುಖ್ಯ ಮಂತ್ರಿಯಾಗಬಹುದೆಂಬ ಮನೋಭಾವವನ್ನಿಟ್ಟುಕೊಂಡು ಕೇಂದ್ರ ಸರ್ಕಾರದ ಅಥವ ಪಾರ್ಲಿಮೆಂಟ್ ಸದಸ್ಯರಾಗಲು ಇಚ್ಛೆಪಡುವುದಿಲ್ಲ. ಇಂಥ ಮನೋಭಾವ ದೇಶದಲ್ಲಿ ಎದ್ದುಕಾಣುತ್ತಿದೆ. ಕೆಲವರು ತಮ್ಮ ಕ್ಷೇತ್ರದಿಂದ ವಿಧಾನಸಭೆಗೆ ಉಮೇದುವಾರರಾಗಿ ನಿಲ್ಲಲು ಮುಂದೆ ಬರುತ್ತಾರೆಯೇ ವಿನಾ ಪಾರ್ಲಿಮೆಂಟಿಗೆ ನಿಲ್ಲುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಚೀಫ್ ಮಿನಿಸ್ಟರ್ ಆಗಬಹುದೆಂಬ ಆಸೆಯಿಂದ ನಿಲ್ಲುವವರಿಗೆ ಒಂದು ಟಿಕೆಟ್ ಸಿಕ್ಕಬೇಕಾದರೆ ಹತ್ತು ಸಾವಿರ ರೂಪಾಯಿ ಖರ್ಚಾಗುತ್ತದೆಂದು ನಾನು ಕೇಳಿದ್ದೇನೆ. ಇಂಥವರು ಇಲ್ಲಿ ಎರಡು ವರ್ಷ ಮುಖ್ಯ ಮಂತ್ರಿಯಾದರೆ ದೇಶ ಉದ್ಧಾರವಾಗುವುದಿಲ್ಲ. ಮುಂದೆ ಚರಿತ್ರೆಯಲ್ಲಿ ಹೆಸರು ಬರೆಯುವಾಗ ಮನುಷ್ಯ ಒಳ್ಳೆಯ ಕೆಲಸ ಮಾಡಿದ್ದಾನೆಯೇ ಅಥವಾ ಕೆಟ್ಟಕೆಲಸ ಮಾಡಿದ್ದಾನೆಯೇ ಎಂಬುದನ್ನು ಬರೆಯುತ್ತಾರೆ. ಕೇಂದ್ರದಲ್ಲಿರುವವರು ಕೆಲವರು ವಿಶಾಲ ಮನೋಭಾವನೆಯಿಂದ ಜನರನ್ನು ಮೆಚ್ಚಿಸಿದರೂ ಕೂಡ ನಮ್ಮ ಸಂಸ್ಥಾನದ ಮಟ್ಟದಲ್ಲಿ ನೋಡಿದರೆ ಅಷ್ಟೂ ಇಲ್ಲ. ಹೀಗಿರುವಾಗ ಇವರು ಕೇಂದ್ರದಲ್ಲಿರುವವರನ್ನು ಏಕೆ ನಿಷ್ಠುರ ಮಾಡಬೇಕು? ನನ್ನ ಉದಾಹರಣೆ ತೆಗೆದುಕೊಂಡರೆ......

Sri K. L. NARASIMHIAH (Hebbur).—Is it relevant to the subject, Sir?

Sri K. P. REVANNA SIDDAPPA.—I will not yield. ಇವರು ಹೇಳಿದುದನ್ನು ಸಾಮಾನ್ಯ ಜನರು ನಂಬುತ್ತಾರೆ. ಸತ್ಯ ಅಸತ್ಯವನ್ನು ಪರಿಶೀಲನೆ ಮಾಡಬೇಕಾದರೆ ಒಂದೆರಡು ಕಡೆ ಹೋಗಿ ನೋಡಲಿ. ಧೈರ್ಯವಿದ್ದರೆ ಆಡಳಿತ ಪಕ್ಷದವರು ಈ ಯೋಜನೆಯನ್ನು ಸೇರಿಸದಿದ್ದರೆ ನಾವೆಲ್ಲರೂ ರಾಜೀನಾಮೆ ಕೊಡುತ್ತೇವೆಂದು ಕೇಂದ್ರಕ್ಕೆ ಬರೆಯಲಿ. ತಿಂಗಳಿಗೆ 150 ರೂಪಾಯಿ ಸಂಬಳ ಕೊಡುತ್ತಾರೆ, ಯಾವುದಾದರೂ ಬೋರ್ಡಿನ ಚೇರ್ಮನ್ ಆಗಿ ಕೆಲಸ ಕೊಡುತ್ತಾರೆ ಎಂದು ಆಸೆ ಇಟ್ಟುಕೊಂಡಿರುವುದರಿಂದ ಅವರು ನಿರ್ದಾಕ್ಷಿಣ್ಯವಾಗಿ ಮಾತನಾಡುವುದಿಲ್ಲ. ಇಂಥ ವಿಷಯದಲ್ಲಿ ನಮ್ಮ ನಾಯಕರು ಸುಮಾರು ಹತ್ತು ಹನ್ನೊಂದು ವರ್ಷಗಳಿಂದ ಸತತ ಪ್ರಯತ್ನಪಟ್ಟರೂ ಸಾಧ್ಯವಾಗದೆ ಈಗ ಇದನ್ನು ಸಭೆಯ ಮುಂದೆ ತಂದುದು ವಿಷಾದಕರವಾದ ಸಂಗತಿ. ತಮ್ಮ ಅಧಿಕಾರವನ್ನು ದುರುಪಯೋಗಪಡಿಸುತ್ತಾರೆ. ಎಂ.ಪಿ.ಸಿ.ಸಿ., ತಾಲ್ಲೂಕು ಕಮಿಟಿ, ತಾಲ್ಲೂಕು ಬೋರ್ಡು, ಜಿಲ್ಲಾ ಬೋರ್ಡು

(SRI K. P. REVANNA SIDDAPPA)

ಇಂಥವುಗಳಿಗೆ ಯಾರು ಚುನಾಯಿತರಾಗಿ ಬಂದರು, ನಮ್ಮವರು ಬಂದರೇ, ಎನ್ನುವ ಕಡೆಗೇ ಇವರ ಗಮನ, ಒಂದು ಪಂಚಾಯಿತಿ ಬೋರ್ಡಿನಲ್ಲಿ ಮೂರು ಜನರನ್ನು ಸೇರಿಸಿಕೊಂಡು ಪಂಚಾಯಿತಿ ಮಾಡುತ್ತಾರೆ, ಯಾರಾದರೂ ನಿಸ್ಪೃಹತೆಯಿಂದ ಕೆಲಸಮಾಡಿ, ಬೇಗ ಕೆಲಸ ಮಾಡಿದರೆ ಅಂಥವರನ್ನು ಅಲ್ಲಿಂದ ಓಡಿಸಲು ಪ್ರಯತ್ನ ಮಾಡುತ್ತಾರೆ.........

Sri K. L. NARASIMHIAH.—Is he relevant, Sir? ಅವರು ಈ ನಿರ್ಣಯದಮೇಲೆ ಮಾತನಾಡುತ್ತಿದ್ದಾರೆಯೇ?

ಅಧ್ಯಕ್ಷರು.—ಶರಾವತಿ ಯೋಜನೆಗೆ ಸಂಬಂಧಪಟ್ಟ ನಿರ್ಣಯದಮೇಲೆ ಮಾನ್ಯ ಸದಸ್ಯರು ಮಾತನಾಡಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರ ಶಿಥಿಲತೆಯ ವಿಚಾರವನ್ನು ಮಾತನಾಡಿದೆ. ಕೊನೆಯದಾಗಿ, ಅವರು ದೇಶಕ್ಕೆ ಆಗಬೇಕಾದ ಸೌಲಭ್ಯಗಳನ್ನೊದಗಿಸಲು ಪ್ರಯತ್ನಮಾಡಿ ಒಳ್ಳೆಯ ಹೆಸರನ್ನು ಪಡೆಯಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Sri R. M. PATIL (Navalgund).—Mr. Speaker, it is really a great pleasure to join with the unanimous voice of the House in commending this resolution which is very vital to the State. In an era of industrialisation it is really a matter of great anxiety if we do not have sufficient power. If we have power, industries will develop; if we have power then only agriculture production will increase. Having this in view at the time the Second Five-Year Plan was designed, the author of the Plan included in the State Plan this scheme. However, this was brushed aside and ultimately included not in the core of the Plan but near the the core of the Plan. I am joining my friends who have spoken with sentiments. I have no doubts, no apprehensions and no difficulties to see that this Plan is included in the core. When it is established that this is near about the core, it requires a little push so as to see it is included. It is with this end in view that this special resolution has been sponsored by the original author of the Second Five-Year Plan. The author of this resolution, while he was in Government—so far I can read his intention—had no doubt that this part of our country has got immeasurable resources not only mines of various materials like manganese, iron ore, clay, etc., but also the rich forests. If we look at the topography of this Sharavthi Project, it is really a great gift to the nation. It is situated on the Western Ghats which are at a distance of not more than 40 miles from the coastline. It is also situated near the plains. Therefore, this source of electricity will not only be useful to the coastline but also to the plains for lift irrigation and various industrial purposes. Some of the speaker have asked, what is the propriety of this special resolution? The Government is there, the Government is run on party lines, one of the members of the same party has sponsored this resolution and so what is the propriety of it? It is only complementary and supplementary to the demand of the Government and nothing else. Therefore, we should not probe into the mind of the author of this resolution and we should not be prepared to entertain any doubt as regards the *bona fides* of the Government in this matter. They have realised and under stood the need for it and they are at it since the last four years. Therefore, we need not entertain any doubt as to the sincerity of Government in this matter. Nor need we entertain any doubt as to the sincerity of the sponsor of this resolution or of the Opposition party. Now, the question is whether it is possible for us to get the necessary aid for this project from the Planning Commission and from the Central Government. Looking to the suggestions made by Hon'ble Members, I see no difficulty in this behalf. One of my elder members of this House said that there were foreign agencies which were out to help us. Another Hon'ble Member also said that there were so many banks which were out to help us. Another Opposition member convincingly pointed out that the electricity that would be available from this project would be the cheapest in the country. When we invest money in a project, as business men we have to think whether there will be adequate return on it. The decision that economists have come to is that if is the best project that can be placed before any authority without any hesitation. We need not at all be afraid that our demand is a just demand. We need not worry that we have no leaders to con-

vince the Centre about the urgency of this project. That is not a correct stand. If we have difficulties—and we do have them—we need not express before everybody that we have got so many difficulties. From that point of view, I would appeal to the members who have expressed their sentiments not to express them only with the object that the project should be executed.

With these few words, I commend this resolution with all my heart.

*ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಈ ಸಭೆಯಲ್ಲಿ ಈಗಾಗಲೆ ನಿನ್ನೆಯಿಂದ ಶರಾವತಿ ವ್ಯಾಲಿ ವಿಷಯದಲ್ಲಿ ವಿಪುಲವಾಗಿ ಚರ್ಚೆಯಾಗಿದೆ, ಮಾಜಿ ಸಚಿವರಾದ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರೇ ನಿರ್ಣಯ ತಂದಿದ್ದಾರೆ ಮತ್ತು ಅದರ ಜೊತೆಗೆ ಸುಮಾರು 80 ಜನ ಸಹಿ ಮಾಡಿದ್ದಾರೆ. ನಮಗೆ ಇಂಡಿಯಾ ಸರ್ಕಾರದಿಂದ ಶರಾವತಿ ವ್ಯಾಲಿ ವಿಷಯದಲ್ಲಿ ಉತ್ತೇಜನ ದೊರೆಯಲಿಲ್ಲವೆಂದು ಈಗಾಗಲೆ ಶ್ರೀ ಹನುಮಂತಯ್ಯನವರು ಮತ್ತು ಶ್ರೀ ಮಲ್ಲಾರಾಧ್ಯರೂ ಸಹ ವಿವರವಾಗಿ ತಿಳಿಸಿದ್ದಾರೆ. ನಮ್ಮಲ್ಲಿ ನಮ್ಮ ಸಂಪ್ರದಾಯದ ಪ್ರಕಾರವಾಗಿ ಇಂದಿನ ದಿವಸ ಸದಸ್ಯರಾಗಿ ನಾವು ಮಾತನಾಡಲಿಕ್ಕೆ ಶಕ್ತಿ ಕುಂದಿಹೋಗಿದೆ. ಹಾಗೆ ಮಾಡಿದವರು ಮುಖ್ಯವಾಗಿ ನಮ್ಮ ಕಾಂಗ್ರೆಸ್ಸಿನ ಮಂತ್ರಿಮಂಡಲದವರು, ಕಾಂಗ್ರೆಸ್ಸಿನ ಕೆಲವು ನಾಯಕರು. ನಾನು ಇಂದಿನ ದಿವಸ ವಿಷಾದದಿಂದ ಹೇಳಬೇಕಾಗಿದೆ, ನಿಮ್ಮ ಹೋರಾಟ ಹೆಜ್ಜೆ ಹೆಜ್ಜೆಗೂ ನಮ್ಮ ಶಕ್ತಿಯನ್ನು ಕಡಮೆ ಮಾಡಿದೆ. ಹೆಚ್ಚು ಮಾಡಲಿಕ್ಕೆ 1947ರಿಂದ ಅನೇಕ ಮಾರ್ಗಗಳಿದ್ದುವು. ಆದರೆ ನಮ್ಮಲ್ಲಿ ಸಣ್ಣ ತರಹ ಸ್ಪರ್ಧೆಯಿಂದ ನಮ್ಮ ಮಟ್ಟವನ್ನು ಕೇಂದ್ರ ಸರ್ಕಾರದಲ್ಲಿ ಎತ್ತಿ ಹಿಡಿಯುವುದಕ್ಕೆ ನಾವು ಅನೇಕ ಸಂದರ್ಭಗಳಲ್ಲಿ ಹಿಂದೆಗೆದಿದ್ದೇವೆ. ಕೆಲವರು ಇಂದಿನ ದಿವಸ ಬಹಳ ಜೋರಾಗಿ ಹೇಳಬಹುದು. ಆದರೆ ನಾನು ತಿಳಿದುಕೊಂಡಿರುವ ಮಟ್ಟಿಗೆ ದಕ್ಷಿಣ ಜೋನ್‌ನಲ್ಲಿ ಮೈಸೂರಿಗೆ ಮೊದಲು ಮಾದರಿ ಸಂಸ್ಥಾನವೆಂದು ಪ್ರಾಶಸ್ತ್ಯವಿತ್ತು. ಇತ್ತೀಚೆಗೆ ಅದು ಕೆಲವು ಕಾಂಗ್ರೆಸ್ಸಿನ ಜನರಿಂದ ಸ್ವಲ್ಪ ಕಡಮೆಯಾಗಿದೆ. ಆದರೆ ಇಂಡಿಯಾ ಸರ್ಕಾರ ಮತ್ತು ಪ್ಲಾನಿಂಗ್ ಕಮಿಷನ್‌ನವರು ನಮ್ಮ ದೇಶದ ಎರಡು ಕೋಟಿ ಜನರ ವಿಷಯವನ್ನು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಇಂದಿನ ದಿವಸ ಶರಾವತಿ ವ್ಯಾಲಿಯಿಂದ ನಮಗಾಗುವ ಪ್ರಯೋಜನವನ್ನು ಸವಿಸ್ತಾರವಾಗಿ ಅನೇಕ ಸದಸ್ಯರು ವಿವರಿಸಿದ್ದಾರೆ. ನಿಜವಾಗಿಯೂ ಕೂಡ ನಾವು ಇಂಡಿಯಾ ಸರ್ಕಾರಕ್ಕೆ ಎಲ್ಲಾ ರೀತಿಯಲ್ಲೂ ತಲೆಬಾಗಿ ನಡೆದುಕೊಂಡಿದ್ದೇವೆ. ನಮ್ಮ ಮಾದರೀಸಂಸ್ಥಾನದ ಜನರನ್ನು ಈ ದಿವಸ ಪ್ಲಾನಿಂಗ್ ಕಮಿಷನ್‌ನವರು ಸ್ವಾಗತಿಸಬೇಕಾಗಿದೆ. ಯಾವ ರೀತಿಯಲ್ಲಾಗಲಿ ಪ್ಲಾನಿಂಗ್ ಕಮಿಷನ್ ಮಾಡಿದ್ದಕ್ಕೆ ಪ್ರತಿಭಟಿಸದೇ ಇದ್ದು ಮತ್ತು ಕೇಂದ್ರ ಸರ್ಕಾರದ ಮತ್ತು ಕ್ಯಾಬಿನೆಟ್ ತೀರ್ಮಾನಕ್ಕೆ ವಿರೋಧವಾಗಿ ಪ್ರತಿಭಟಿಸದೇ ಇದ್ದು ಇಂದಿನ ದಿವಸ ಬಹಳ ವ್ಯಥೆಯಿಂದ ಪ್ರತಿಭಟಿಸಬೇಕಾಗಿದೆ. ನಾನು ಪ್ರತಿಪಕ್ಷದ ಒಬ್ಬ ಸದಸ್ಯನಾಗಿ ಹೇಳಬೇಕಾದರೆ ನಿಜವಾಗಿಯೂ ದಕ್ಷಿಣ ಜೋನ್‌ಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆಂದು ಕೇಂದ್ರ ಸರ್ಕಾರದ ಬಡ್ಜೆಟ್ಟನ್ನು ನೋಡಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಂದಿನ ದಿವಸ ಅನೇಕರು ಪಾರ್ಲಿಮೆಂಟ್ ಸದಸ್ಯರಾಗಿದ್ದಾರೆ, ಅಲ್ಲಿ ಹೋರಾಡಿದ್ದಾರೆ. ಪ್ಲಾನಿಂಗ್ ಕಮಿಷನ್ ಮತ್ತು ಸರ್ಕಾರ ಹೇಳುವುದಾದರೆ ದಕ್ಷಿಣ ಜೋನ್‌ಗೆ ಒದಗಿಸಿರುವುದನ್ನು ಮತ್ತು ಉತ್ತರ ಜೋನ್‌ಗೆ ಒದಗಿಸಿರುವುದನ್ನು ಅಂಕಿ ಅಂಶಗಳ ಮೂಲಕ ಹೇಳಬೇಕಾಗಿದೆ. ನಮಗೆ ಅಂದರೆ ದಕ್ಷಿಣ ಜೋನ್‌ಗೆ ಮೊದಲನೆ ಯೋಜನೆಯಲ್ಲಿ ಸುಮಾರು ಕಾಲು ಭಾಗ ಸಹ ಖರ್ಚು ಮಾಡಿಲ್ಲ. ಅದೇ ಉತ್ತರ ಜೋನ್‌ಗೆ ಸುಮಾರು ಮುಕ್ಕಾಲು ಭಾಗ ಖರ್ಚು ಮಾಡಿ ತಕ್ಷಣ ಕೆಲಸ ಮಾಡಿ ಬಹಳ ಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ಅಂದರೆ ಮೊದಲನೆಯ ಮತ್ತು ಎರಡನೆಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಪ್ಲಾನಿಂಗ್ ಕಮಿಷನ್ ಮತ್ತು ಸೆಕ್ರೆಟೆರಿಯೇಟ್ ಕೈವಾಡವಿದೆ. ಈ ಶರಾವತಿ ಯೋಜನೆಯನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಪಾರ್ಲಿಮೆಂಟ್ ಸದಸ್ಯರು, ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು. ಅವರ ಗಮನವನ್ನು ಇತ್ತಕಡೆ ಎಳೆಯಬೇಕು, ಪಾರ್ಲಿಮೆಂಟ್ ಸದಸ್ಯರು, ಮಂತ್ರಿಗಳು, ಎಲ್ಲ ಪಕ್ಷಗಳ ಸದಸ್ಯರು, ಕೇಂದ್ರ ಸರಕಾರದ ಕಡೆಗೆ ಹೋಗಿ ಈ ಶರಾವತಿ ಯೋಜನೆಯನ್ನು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡದಿದ್ದರೆ ಪ್ರತಿಭಟಿಸುತ್ತೇವೆಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಈ ಯೋಜನೆಯನ್ನು ಕೈ ಬಿಡುವುದಾದರೆ ಕಾಂಗ್ರೆಸ್ ಮಂತ್ರಿಮಂಡಳ ರಾಜೀನಾಮೆ ಕೊಡಲಿ. ಆತ್ಮಸಾಕ್ಷಿಯಾಗಿ ನಾವೂ ಸಹ ರಾಜೀನಾಮೆ ಕೊಡುತ್ತೇವೆ. ಮತ್ತೊಮ್ಮೆ ಚುನಾವಣೆ ನಡೆದು ಈ ವಿಧಾನಸಭೆ ಪುನಃ ರಚಿತವಾಗಲಿ. ಬೇಕಾದರೆ ಗವರ್ನರರ ರಾಜ್ಯಾಡಳಿತ ಪ್ರಾರಂಭವಾಗಲಿ. ಈ ವಿಷಯದಲ್ಲಿಯೂ ನಮ್ಮ ಸಂಸ್ಥಾನ ಮಾದರೀ ಸಂಸ್ಥಾನವಾಗಲಿ. ಈ ಶರಾವತಿ ಯೋಜನೆಯ ಸಂಬಂಧದಲ್ಲಿ ಅಂಕಿಅಂಶಗಳನ್ನು ಸಂಗ್ರಹಿಸಿ ಪ್ಲಾನಿಂಗ್ ಕಮಿಷನ್ ಮುಂದೆ ಇಡಬೇಕು. ಯಾವ ಯಾವ ಯೋಜನೆಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ ಎಂಬ ವಿವರವಾದ ಅಂಕಿ ಅಂಶಗಳನ್ನು ಅವರ ಮುಂದೆ ಇಡಬೇಕು. ಸುಮ್ಮನೆ ಈ ರಿಜಲ್ಯೂಷನ್ ಕಳಿಸಿದರೆ ಸಾಲದು. ವಿದೇಶಿ ವಿನಿಮಯದ ತೊಂದರೆಯನ್ನು ನಮಗೆ ಅವರು ಹೇಳಬಹುದು. ಈ ತೊಂದರೆ ನಮ್ಮ ಮೈಸೂರು ಸಂಸ್ಥಾನಕ್ಕೆ ಅಷ್ಟೇ ಇದೆಯೇ? ಬೇರೆ ಯೋಜನೆಗಳನ್ನು ಇದಕ್ಕಾಗಿ ನಿಲ್ಲಿಸಿದ್ದಾರೆಯೇ? ಇಂಥ ಒಂದು ಸಣ್ಣ ವಾದವನ್ನು ನಮಗೆ ಪ್ಲಾನಿಂಗ್ ಕಮಿಷನ್ ಅವರು ಹೇಳುವುದು ಸರಿಯಲ್ಲ. ಈ ವಿದೇಶಿ ವಿನಿಮಯದ ತೊಂದರೆ ಇದೆ ಎಂಬ ಕಾರಣವನ್ನು ಅವರು ಹೇಳುವುದಾದರೆ ಖಂಡಿತವಾಗಿ ಅದನ್ನು ನಾವು ಒಪ್ಪಿಕೊಳ್ಳಲು ಆಗುವುದಿಲ್ಲ. ಇದೊಂದು ಸಣ್ಣ ನೆಪ ಮಾತ್ರ ಆಗಿದೆ. ಮಾನ್ಯ ಸದಸ್ಯರಾದ ಶ್ರೀ ಕೆ. ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ಈ ಶರಾವತಿ ಯೋಜನೆಯ ಬಗ್ಗೆ ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಈ ನಿರ್ಣಯ ಪಾಸುಮಾಡುವುದರಿಂದ ತೃಪ್ತರಾಗಬಾರದು. ಎಲ್ಲರೂ ಕೂಡಿಕೊಂಡು ಡಿಲ್ಲಿಗೆ ಹೋಗಬೇಕು. ಕೇಂದ್ರ ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳಬೇಕು. ಆ ರೀತಿ ಮಾಡುವರೆಂದೂ, ಈ ಶರಾವತಿ ಯೋಜನೆಯನ್ನು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಂಡು 1961ರ ವೇಳೆಗೆ ಕಾರ್ಯಗತ ಮಾಡುತ್ತಾರೆಂದು ನಂಬಿ, ಈ

(ಶ್ರೀ ಎಚ್. ಜಿ. ನರಸಿಂಹೇಗೌಡ)

ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲ ಕೊಟ್ಟು ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಡಿ.ಟಿ. ಸೀತಾರಾಮರಾವ್ (ಭದ್ರಾವತಿ).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಹನುಮಂತಯ್ಯನವರು ಶರಾವತಿ ಯೋಜನೆಯ ವಿಷಯದಲ್ಲಿ ಈ ಒಂದು ಖಾಸಗೀ ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ಶ್ರೀ ಹನುಮಂತಯ್ಯನವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಕೇಂದ್ರ ಸರ್ಕಾರ ಮತ್ತು ಪ್ಲಾನಿಂಗ್ ಕಮಿಷನ್ ಅವರಿಗೆ ಒತ್ತಾಯ ಪಡಿಸಬೇಕಾದ ಇಂಥ ಒಂದು ನಿರ್ಣಯವನ್ನು ನಮ್ಮ ಸರ್ಕಾರದವರೇ ಈ ಸಭೆಯ ಮುಂದೆ ಇಟ್ಟಿದ್ದರೆ ಹೆಚ್ಚು ಸಂತೋಷವಾಗುತ್ತಿತ್ತು.

ಒಂದು ದೇಶ ಮುಂದುವರಿಯಬೇಕಾದರೆ ಕೈಗಾರಿಕಾಭಿವೃದ್ಧಿಯು ಆಗಬೇಕಾದುದು ಅವಶ್ಯ. ನಮ್ಮ ದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿ ವಿಶೇಷವಾಗಿ ಆಗಬೇಕಾಗಿದೆ. ನಮ್ಮ ದೇಶದಲ್ಲಿ ಶೇಕಡಾ 80ರಷ್ಟು ಜನ ಭೂಮಿಯನ್ನು ಅವಲಂಬಿಸಿಕೊಂಡು ಇದ್ದಾರೆ. ಭೂ ಸುಧಾರಣೆಯ ಸಮಸ್ಯೆಯು ನಮ್ಮ ಮುಂದೆ ಇದೆ. ಇನ್ನೂ ಅನೇಕ ಸಮಸ್ಯೆಗಳೂ ಸಹ ಇವೆ. ಪರದೇಶಗಳಲ್ಲಿ ಅನೇಕ ತೊಂದರೆಗಳನ್ನೂ ಕಷ್ಟಗಳನ್ನೂ ಎದುರಿಸಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಆ ದೇಶಗಳು ಮುಂದೆ ಬಂದುದು ಬಹಳ ಮಹತ್ವದ್ದಾಗಿದೆ. ನಮ್ಮ ದೇಶದಲ್ಲಿರುವ ಸಣ್ಣ ಪುಟ್ಟ ಕೈಗಾರಿಕೆಗಳು ಅಭಿವೃದ್ಧಿಯಾಗಲೇ ಬೇಕು, ಎಂದರೆ ಆಗ ದೇಶ ಮುಂದುವರಿಯುತ್ತದೆ. ಗ್ರಾಮ ಕೈಗಾರಿಕೆಗಳ ಜೊತೆಗೆ ದೊಡ್ಡ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕಾದುದು ಅತ್ಯಗತ್ಯವಾಗಿದೆ. ಮೈಸೂರು ಸಂಸ್ಥಾನದ ಏಳಿಗೆಗಾಗಿ ಅನೇಕ ಗಣ್ಯ ವ್ಯಕ್ತಿಗಳು ಇಲ್ಲಿಯವರೆಗೆ ದುಡಿದಿದ್ದಾರೆ. ರಾಮರಾಜ್ಯ ಮಾಡಬೇಕೆಂದು ಪ್ರಯತ್ನಪಟ್ಟಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದುಳಿದ ಮಲೆನಾಡು ಪ್ರದೇಶ ಅಭಿವೃದ್ಧಿಯಾಗಬೇಕಾಗಿದೆ. ಮಲೆನಾಡಿನಲ್ಲಿರತಕ್ಕ resources ಬೇರೆ ಕಡೆ ಇಲ್ಲ. ಕಚ್ಚಾಮಾಲು, ಖನಿಜ ಸಂಪತ್ತು ಬೇಕಾದಷ್ಟು ಇವೆ. ಈ ಎಲ್ಲ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ವಿದ್ಯುಚ್ಛಕ್ತಿಯು ಅತ್ಯವಶ್ಯವಾಗಿ ಬೇಕಾಗುತ್ತದೆ. ವಿದ್ಯುಚ್ಛಕ್ತಿ ಉತ್ಪಾದನೆಯ ಮೂಲಕ ಬೇರೆ ಕೈಗಾರಿಕೆಗಳು ಸಹ ಅಭಿವೃದ್ಧಿಯಾಗುತ್ತವೆ. ನಮ್ಮ ಪ್ರದೇಶಕ್ಕೆ ವಿದ್ಯುಚ್ಛಕ್ತಿಯ ಪೂರೈಕೆಯು ಸಾಕಷ್ಟು ಇಲ್ಲ. ಅಡಕೆ ತೋಟಗಳಿಗೆ ರಾತ್ರಿ ವೇಳೆಯಲ್ಲಿ ಮಾತ್ರ ವಿದ್ಯುಚ್ಛಕ್ತಿಯನ್ನು ಪೂರೈಸಲಾಗುವುದು. ಆದರೆ ಹಗಲು ಕೊಡುವುದಿಲ್ಲ ಎಂದು ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಹೇಳಿದ್ದಾರೆ.

5 P.M.

ನಮ್ಮಲ್ಲಿ ನಾವು ಮುಂದೆ ಎಷ್ಟು ಯೋಜನೆಗಳನ್ನು ಇಟ್ಟುಕೊಂಡಿದ್ದೇವೆಯೋ ಅದು ಪುಸ್ತಕದಲ್ಲಿ ಆಗುತ್ತದೆಯೇ ವಿನಾ ಕಾರ್ಯತಃ ಆಗುವುದಿಲ್ಲ. ರಾತ್ರಿ ಹೊತ್ತು ಉಪಯೋಗಮಾಡಿಕೊಂಡು ಅಡಿಕೆ ಬೆಳೆ ತೆಗೆಯುವುದಕ್ಕೆ ಆಗುವುದಿಲ್ಲ ಎಂದು ರೈತರು ಹೇಳುತ್ತಾರೆ. ಕಷ್ಟ ಪರಿಸ್ಥಿತಿ ಏನು ಎಂಬುದನ್ನು ಹೇಳುತ್ತಾ ಇದ್ದೇನೆ. ಯಾವಾಗ ನಮ್ಮ ದೇಶಕ್ಕೆ ವಿದ್ಯುಚ್ಛಕ್ತಿ ಕಡಮೆಯಾಗುತ್ತದೆಯೋ ಆಗ ನಮ್ಮ ದೇಶದ ಎಲ್ಲಾ ಯೋಜನೆಗಳೂ ಅಪ್‌ಸೆಟ್ ಆಗುತ್ತವೆ. ಮುಂಚೆ ನಮ್ಮ ದೇಶದ ಸಾಹಿತಿಗಳು 'ಉದಯವಾಗಲಿ ಚೆಲುವ ಕನ್ನಡ ನಾಡು' ಎಂದು ಹಾಡುತ್ತಿದ್ದರು. ಕೇಂದ್ರ ಸರ್ಕಾರದವರು ಮಲತಾಯಿ ದೃಷ್ಟಿಯಿಂದ ವಿಚಾರ ಮಾಡದೇ ಇದೂ ಕೂಡ ತಮ್ಮ ರಾಷ್ಟ್ರ ಎಂದು ಭಾವನೆಮಾಡಿ 'ಉದಯವಾಗಲಿ ಚೆಲುವ ಕನ್ನಡನಾಡು' ಎನ್ನುವುದನ್ನು 'ಉದಯವಾಯಿತು ಚೆಲುವ ಕನ್ನಡ ನಾಡು' ಎನ್ನುವ ಹಾಗೆ ಮಾಡಬೇಕು. ಕನ್ನಡನಾಡು ಉದಯವಾಗಿಲ್ಲ. ಸಂಪೂರ್ಣವಾಗಿ ಉದಯವಾಗಬೇಕಾದರೆ ಮೊದಲನೆಯ ಅವಶ್ಯಕತೆಯಾದ ವಿದ್ಯುಚ್ಛಕ್ತಿಗೆ ಪ್ರಾಮುಖ್ಯತೆ ಕೊಟ್ಟು ಆ ದೀಪದಿಂದ ಎಲ್ಲರಿಗೂ ಬೆಳಕಾಗುವಂತೆ ಮಾಡಬೇಕು. ಆ ದೃಷ್ಟಿಯಿಂದ ಸಾಹಿತಿಗಳಿಗೆ 'ಉದಯವಾಯಿತು ಚೆಲುವ ಕನ್ನಡನಾಡು' ಎಂದು ಹಾಡಬೇಡಿ ಎಂದು ಹೇಳಬೇಕಾಗುತ್ತದೆ. ಮುಖ್ಯವಾಗಿ ಈ ಒಂದು ಯೋಜನೆ ಆಗಬೇಕೆಂಬ ದೃಷ್ಟಿಯಿಂದ ಎಲ್ಲರೂ ಕೂಡ ಇದಕ್ಕೆ ಬೆಂಬಲ ಕೊಡುವುದು ನ್ಯಾಯವಾಗಿದೆ. ವಿರೋಧ ಪಕ್ಷದವರು ಏನೊಂದು ಉದ್ದೇಶ ಇಟ್ಟುಕೊಂಡು ಮಾಡಿದರೂ ಅವರ ಟೀಕೆ, ಸಾಕಾದಷ್ಟು ಇದ್ದೇ ಇರುತ್ತದೆ. ಟೀಕೆ ಮಾಡುವುದು ವಿರೋಧ ಪಕ್ಷದವರ ಸ್ವಭಾವ. ಸರ್ಕಾರದವರಲ್ಲಿ ಏನು ತಪ್ಪಿದೆ ಎನ್ನುವುದನ್ನು ತಿಳಿಸಿ ಅವರ ಗಮನವನ್ನು ಎಳೆಯುವುದು ಅವರ ಕರ್ತವ್ಯ. ಈ ಕರ್ತವ್ಯ ದೃಷ್ಟಿಯಿಂದ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದರಲ್ಲಿ ಯಾರೂ ಹಿಂದೆ ಬಿದ್ದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—Point of order, Sir. ಮಾನ್ಯ ಮಿತ್ರರು ವಿರೋಧ ಪಕ್ಷದವರು ಟೀಕೆ ಮಾಡುವುದು ಯಾವಾಗಲೂ ಅವರ ಸ್ವಭಾವ ಎಂದು ಹೇಳಿದರು. ಸ್ವಭಾವ ಎಂದು ಹೇಳುವುದು ಸರಿಯೇ!

ಅಧ್ಯಕ್ಷರು.—ಇದರಲ್ಲಿ "point of order" ಏನೂ ಇಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಒಳ್ಳೆಯ ಸಲಹೆ ಕೊಡುವುದು ನ್ಯಾಯ. ಹಾಗೆ ಕೊಟ್ಟಿದ್ದಾರೆ ಎಂದು ಹೇಳಿದೆ. ಅದನ್ನು ನಾವು ಸ್ವಾಗತಿಸುತ್ತಾ ಇದ್ದೇವೆ. ಇಬ್ಬರೂ ಸೇರಿ ಸರ್ಕಾರದವರು ಕಾರ್ಯಸಾಧನೆ ಮಾಡಬೇಕೆಂದು ಹೇಳುತ್ತಾ ಇರುವುದಕ್ಕೆ ಸಂತೋಷಪಡುತ್ತಾ ಇದ್ದೇನೆ. ಆದ್ದರಿಂದ ಈ ಒಂದು ನಿರ್ಣಯ ಕೇಂದ್ರ ಸರ್ಕಾರದವರನ್ನು ಒತ್ತಾಯ ಪಡಿಸುವುದಕ್ಕೆ ಬಹಳ ಅನುಕೂಲವಾಗಿದೆ; ಮತ್ತು ಇದು ದೇಶದ ದೃಷ್ಟಿಯಿಂದ ಬಹಳ ಮಹತ್ವದ ಯೋಜನೆ. ಮಲೆನಾಡಿನ ಅಭಿವೃದ್ಧಿಗೆ ಇದು ಬಹಳ ಮುಖ್ಯವಾಗಿರತಕ್ಕದ್ದು. ದೇಶದ ಏಳಿಗೆಯ ಕಾರ್ಯಕ್ರಮಕ್ಕೆ ಇದು ಬಹಳ ಅವಶ್ಯಕವಾಗಿ ಬೇಕಾಗಿದೆ. ಈ ಶರಾವತಿ ವ್ಯಾಲಿ ಯೋಜನೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಲು ಕಾರ್ಯಕ್ರಮ ತೆಗೆದುಕೊಳ್ಳಬೇಕು, ವಿದೇಶ ವಿನಿಮಯ ಕೊಡಬೇಕೆಂದು ಪ್ರತಿಯೊಬ್ಬರೂ ಏನು ಹೇಳುತ್ತಾ ಇದ್ದಾರೆ ಅದನ್ನು ಪುಷ್ಟೀಕರಿಸಿ ಈ ನಿರ್ಣಯವನ್ನು ತಂದಿರುವ ಶ್ರೀ ಹನುಮಂತಯ್ಯನವರನ್ನು ಹೃತ್ಪೂರ್ವಕವಾಗಿ ವಂದಿಸಿ, ಒಂದು ಕಮೀಷನ್ ನೇಮಕಮಾಡಿ, ಅದರಲ್ಲಿ ಪಬ್ಲಿಕ್ ವರ್ಕ್ಸ್ ಮಿನಿಸ್ಟರು ಮುಖ್ಯ ನಾಯಕರಾಗಿದ್ದು ಕಾಂಗ್ರೆಸ್ ಪಕ್ಷದವರು, ವಿರೋಧ ಪಕ್ಷದವರ ಸದಸ್ಯರ ಒಂದು ನಿಯೋಗ ಕೇಂದ್ರ ಸರ್ಕಾರಕ್ಕೆ ಹೋಗಿ ಪ್ಲಾನಿಂಗ್ ಕಮೀಷನ್ ಅವರ ಮುಂದೆ ಪೂರ್ಣ ಚಿತ್ರ ಇಡಬೇಕೆಂದು ಹೇಳುತ್ತೇನೆ. ಮೈಸೂರನ್ನು ಜಪಾನಿನ ಹಾಗೆ ಕೈಗಾರಿಕೆಯಲ್ಲಿ ಮುಂದುವರಿದ ದೇಶವನ್ನಾಗಿ ಮಾಡಬೇಕಾಗಿದೆ. ಇದು ಇಡೀ ಭಾರತ ದೇಶದಲ್ಲಿ ಮೊದಲು ಮುಂದುವರಿದ ದೇಶ, ಇದು ಹಿಂದೆ ರಾಮರಾಜ್ಯ ಎಂದು ಏನು ಹೆಸರು ಪಡೆದಿತ್ತೋ

ಅದನ್ನು ಶಾಶ್ವತವಾಗಿ ಉಳಿಸಿಕೊಳ್ಳಬೇಕಾದರೆ ಮೈಸೂರಿನಲ್ಲಿರತಕ್ಕ ಎಲ್ಲರೂ ಒತ್ತಾಯ ಮಾಡಬೇಕು. ಇದು ಇಡೀ ಕರ್ನಾಟಕದಲ್ಲಿರತಕ್ಕ ಎರಡು ಕೋಟಿ ಪ್ರಜೆಗಳಿಗೂ ಅಗತ್ಯ, ಮುಖ್ಯವಾದದ್ದು ಎಂದು ಕೇಂದ್ರ ಸರ್ಕಾರದವರಿಗೆ ಮನವರಿಕೆ ಮಾಡಬೇಕೆಂದು ಈ ಸಭೆಯ ಮೂಲಕ ನಾನು ಪ್ರಾರ್ಥನೆ ಮಾಡಿಕೊಂಡು, ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*Sri V. SRINIVAS SHETTY (Coondapur).—Sir, I wish to lend my humble support to this Resolution, but with a very heavy heart. On all hands, it has been admitted that it is one of the most economical, that it is one of the most urgent, and the most necessary Plan for the State. Not only that, the Planning Commission had given its fullest support in the initial stages. But it has neglected it in the Second Five-Year Plan. We find now that there is a snag that in the Planning Commission or in the Second Five-Year Plan, some circles have been created, the smallest circle, what is called the core, and circles around it, and circles have been formed around the core. We are told officially that this has become a non-core Plan and it has receded outside the core, and that several Governments adjacent to the State—for example Madras, Andhra and Bombay in particular—have gone ahead of us. It has been suggested or insinuated that certain influences were at work, that the persons in authority in the neighbouring three States I have mentioned are able to get whatever they want, that we have got very thin wires to pull, but that they have got thicker wires! Is it a crime to pull wires in the interests of their own States and get things done? Are we sobbing here or are we whimpering here and showing our weakness that our cries are not heard and that we are not able to pull wires and that even if we go to Delhi, the powers that be do not hear us, and that they do not heed us? Knowing full well that we have got a very good case . . . .

(*Interruption*)

A good lawyer is said to be a tactful lawyer and a cheeky lawyer; two of the most important factors which make for a good lawyer is tact and cheek. We seem to have lost both of them. Now we should not be jealous of the neighbouring States of Madras, Andhra and Bombay.

Just a few mements ago an Hon'lbe friend showed me our achievements in the First Five-Year Plan. But what was our achievement in the First Five-Year Plan? It was miserable. What is our achievement in the two years of the Second Five-Year Plan? It is totally quite shameful and miserable. Who are responsible for this? It is now the second year of the Second Five-Year Plan. We come before this House and cry and whimper and weep and say that we want the support of all the Hon'ble Members so as to state our case before the Planning Commission and the Government of India. Now I have got a feeling that we may be staging a bit of a drama here. I expect to hear from the Hon'ble Minister for P.W.D., why Government is hopeful of achieving this objective, how Government knows that the Centre is going to help us. Of course they want to show that they have got an achievement to their credit that they fought for this to be included in the core of the Plan though the Government of India and the Planning Commission were not willing, but that they wrested it from them., Is it a bit of drama we are witnessing? My own impression is that no sane Government, no sane Planning Commission in the face of this very cogent argument will refuse to help in us achieving this Plan, Sir. I was astonished to hear from the lips of the Hon'ble Minister for Public Works that we ought not to tread on the central corns, not offend people at Delhi. Yesterday some friends said some bitter things about the Centre and of the powers that are in Delhi. It was said Sir, by some that we should go with a begging bowl to the Centre and if we go meekly and not hurt anybody, we will be able to get our objective.

Sri P. G. SIDHANTI (Muddebihal).—You are a tactful lawyer!

Sri V. SRINIVAS SHETTY.—Do you remember, Sir, how the Assam Government got the oil refinery very recently? Do you remember that the Centre refused to give oil refinery to Assam and do you know that they have

(SRI V. SRINIVAS SHETTY)

got it now? By what methods? Some Hon'ble Member here proposed that we should even offer Satyagraha if necessary. We will offer Satyagraha. They did it in Assam, and they got it. Do you know how the Central Government closed their eyes to the Andhra sentiment for a separate province. They said there can be no linguistic division. But POTTI SRIRAMULU offered his life. There was chaos in Andhra and immediately everything crumbled down. I am not going to suggest that we must also follow the same methods. But I do say that you should not go there with a begging bowl. Do not go there meekly. It is humiliating. Please do not humiliate the State and its people. If we understand the attitude of the Centre correctly only such of the States as have kicked them, have got what they wanted. If you go to the Centre and say "we are poor people; you give us Sharavathi valley project" they may refuse. Madras has gone ahead; Bombay has gone ahead; Andhra has gone ahead. They will say 'you are worthless people; you are not able to spend money that is given under the First Five-Year Plan. and the Second Five-Year Plan. You are ignoramuses.' Sir, I am not going to say that you should abuse personages at Delhi. But to say that we ought not to offend the Centre and that whatever the Central Government does is sacrosanct, is something that does not appeal to me at all. I personally feel that I am voicing the feelings of the Opposition in this House, we should not meekly submit in this affair. Because there is no gainsaying the fact that this project is a very vital project. It is abosultely necessary for the State. So far as the Second Five-Year Plan is concerned, it is very necessary that this vital plan should be included in it. It is absolutely necessary. I am quite sure and hopeful Sir, that the Centre and the Planning Commission will not refuse your request, if only you put before them proper arguments.

Now, I have got one request to make to you. Not only should you say that you have the support of the whole House, but I suggest, Sir, that the whole proceedings of this House for the last two days, yesterday and today, may be forwarded to the Centre. Let them read what the Hon'ble Members of this House have stated about the actions of the Centre.

It has been quite clear from the speeches of the Hon'ble Members on the other side that the destinies of the State and the future of the State are in the hands of small men. It has been said that at the present juncture, the State is not in the hands of proper men. It is the misfortune of the State that small men govern and bigger men remain outside. All the actions of this Government and the words that we have heard in this House for the last two days have made it clear, as clear as day light, that the persons who rule us, who govern us or the persons in whose hands the destiny of the State is, are unable, are incapable and they are small men.

SRI N. RACHIAH (Minister for Excise and Social Welfare).—What is the meaning of 'small men'?

SRI V. SRINIVAS SHETTY.—Not big. It is the misfortune of the State. It ought not to have been so. It is the misfortune of the State that a scheme such as this which had been included in the Second Plan could not go through and these gentlemen, these persons who are in power were unable to make the Centre, to make the Planning Commission, see the light and agree to give whatever help was necessary in this direction. We are having at the head of the Government, a set of frustrated men. I am really sorry that you are unable to make yourself felt at the Centre and in the Planning Commission. Don't be jealous that certain persons of Madras and Andhra are at the head of Planning Commission or in seats of power in the Centre. Why don't we also have some of our own men in the Central Government and in the Planning Commission?

MR. SPEAKER.—Please be as brief as possible.

AN HON'BLE MEMBER.—We have our M.Ps. there.

Sri V. SRINIVAS SHETTY.—Yes, Sir. In spite of your M.P. and all our Ministers, you are unable to make yourself felt.

Sir, even now I am quite hopeful that no government except an insane Government or no Planning Commission except an insane Planning Commission will turn down our requests and I suppose that the people at Delhi will still give heed to our words.

One more suggestion, Sir. This Government is in the habit of seeing everything in the party spirit. This is one of the most important subjects which ought not to be viewed with party spirit. I suggest that a corporation be formed for this project. It is a very big scheme costing 50 crores. Corporations are formed for all schemes like Bhakra Nangal, the Damodar Valley scheme and I suggest that some such corporation be formed for this scheme also to expedite it and manage it well. We hear, Sir, the sorry tale of the work that is going on for the last 2 to 2½ years. Delay, corruption all these things are to be found there. To avoid all these criticisms, it is better that a corporation is formed to manage this scheme and I hope that at least now this Government will be able to achieve their objective....

Sri K. HANUMANTHAIYA.—Does the Hon'ble Member know that many corporations formed by the Government of India have not come up to expectations you envisage here ?

Sri V. SRINIVAS SHETTY.—I do feel that there are many failures. My only fear is that it will not be completed. That is the reason why I want a corporation to manage this. With these few words I lend my full support to this.

*Sri T. SIDDALINGAIYA (Dodballapur).—There seems to be no difference of opinion in regard to the subject under discussion. Everyone in this House is supporting this resolution probably with a little more veheamence than required. In the Plan the scheme has been included. The only thing is there seems to be some forgetfulness on the part of those who ought to execute it. As a reminder, I submit this resolution will be useful. None of us has expressed opinion against it. The Government as well as the Hon'ble Members need not have, in my opinion, imported so much of heat.

Sri J. B. MALLARADHYA.—I thought there was light.

Sri T. SIDDALINGAIYA.—There is a lot of light.

We need not have fought over this question. The Government need not have put us to the trouble of discussing it. In this country there is a kind of feeling against the Central Government. All States are equally dissatisfied; they have some grouse or the other. The Centre is also at fault in having given room for this. Any amount of discussion will not help. We are all unanimous and in one voice we say that this resolution must be sent to the Centre. As our lawyer friend put it, even though a case is good, we must place it before a Judge in a proper manner. After all in the Centre there are our friends; they are patriotic and they have shown greater consideration towards Mysore. They have recognised that Mysore was the progressive State and it has been recognised as one of the best centres in the whole of India. Various Central Industries and Defence Industries have been started here. I say the Centre has got some great affection for Mysore State. We have only to make proper representation so that they might take up and complete the project. It is not enough if it is included; it must be implemented. It is not only in the interest of the State but in the interest of the whole nation. The Centre also will be safer if they consider that Mysore State is the hub if not the heart of whole of India. Just imagine the defence and heavy industries that have to be fed with this power. Mysore State has the reputation of having progressed because of power. The whole world is measuring our progress only by the extent of electricity that we have. That is the barometer for all scientific progress. The Planning Commission has recognised that. I believe that in our representation we stand to gain not only for the whole

(SRI T. SIDDALINGAIYA)

State but also for the whole country. The implementation of this project would be a good argument. To impress upon the Central Government and the Planning Commission I want to propose that one man commission sufficiently empowered, with a kind of plenipotentiary powers, must be deputed to the Centre. It is a misfortune because before integration we were progressing slowly and we had a kind of satisfaction. We were sure that we were on the path of progress and everybody had recognised it. After integration we were given to feel that we were part of the whole of India and we will be given more help and support for improvement of our industries. But, unfortunately it is not given. Therefore, as a part of the integral whole we have only to suggest to the Centre that Mysore has to be counted as one of the best parts of the entire nation and I am sure that this State will acquit itself very well in the progress of the whole country. The Centre also depends very much upon the progress that Mysore makes. Therefore, I submit that the power that is required for the development of industries has to be first looked into. In this, I think, there will be unanimity of opinion that a one man commission is sufficient.

If we select one man who can really produce some good effect, it is enough. It would be just like selecting a good lawyer—though there may be a number of juniors, the presentation of facts by a good lawyer will produce good effect. I request that this proposal may be considered by the House and a commission deputed so that this may be put into action.

Sri H. M. CHANNABASAPPA.—May I know how long we are sitting?

Mr. SPEAKER.—The programme is, I will give chance to a couple of of members and the mover of the resolution will reply. So far as the Minister's reply is concerned, he will speak tomorrow and the resolution will be put to vote tomorrow.

Sri K. HANUMANTHAIYA.—So far as the mover is concerned, he will be able to make up is mind as to whether the resolution has to be put to vote or withdrawn in the light of the reply the Government gives. According to rules, the Government has two opportunities to reply. Therefore I submit the mover of the resolution will reply after the Government makes the statement.

Mr. SPEAKER.—Of course the Minister may speak twice but in order to curtail the time, it is better he makes one statement.

Sri K. HANUMANTHAIYA.—It is only the Government's reply that will be able to shape the opinion of this House. Therefore, I suggest that the Minister may be allowed to reply.

Mr. SPEAKER.—I have no objection. I think the mover of the resolution will not take a long time to reply.

5-30 P.M.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಮಾನ್ಯ ಹನುಮಂತಯ್ಯನವರು ತಂದಿರತಕ್ಕ ಈ ಠರಾವಿನ ಮೇಲೆ ಹಾಗೂ ವಿರೋಧಪಕ್ಷದ ಸದಸ್ಯರಾದ ಶ್ರೀ ಮಲ್ಲಾರಾಧ್ಯರು ಮತ್ತು ಶ್ರೀ ವೀರಣ್ಣಗೌಡರು ಒಟ್ಟಿಗೆ ತಂದಿರತಕ್ಕಂಥ ಈ ಠರಾವಿನ ತಿರುಳು ಎಷ್ಟರಮಟ್ಟಿಗೆ ಸಮಯೋಚಿತವಾಗಿದೆಯೆಂಬ ಬಗ್ಗೆ ಅನೇಕ ಮಿತ್ರರು ವಿಚಾರ ಪೂರಿತವಾಗಿ ಭಾಷಣ ಮಾಡಿದ್ದನ್ನು ಕೇಳಿದ್ದೇವೆ. ಇದಕ್ಕೆ ಮುಂಚೆ ಇಂಥ ಠರಾವು ಈ ಸಭೆಯಲ್ಲಿ ಏತಕ್ಕೆ ಬರಬೇಕಾಗಿತ್ತು, ಇದರ ಹಿನ್ನೆಲೆಯೇನು ಎಂಬುದನ್ನು ಸ್ವಲ್ಪಮಟ್ಟಿಗೆ ನಾವು ಪರಿಚಯಮಾಡಿಕೊಂಡರೆ ಬಹುಶಃ ಇಂಥ ಬೃಹತ್ ಯೋಜನೆಯ ಪ್ರಯೋಜನವನ್ನು, ನಮ್ಮ ಎರಡು ಕೋಟಿ ಜನರ ಪರಿಸ್ಥಿತಿಯನ್ನು ನಮ್ಮ ರಾಜ್ಯ ಸರ್ಕಾರದವರು ಚೆನ್ನಾಗಿ ಅರಿತು ಅದಕ್ಕೆ ತಕ್ಕ ಪ್ರಯತ್ನಮಾಡಿರಲಿಲ್ಲ ಎಂದು ಹೇಳಿದರೆ ಅದನು ಅಪಾದನೆಯೆಂದು ತಿಳಿದುಕೊಳ್ಳಬಾರದು, ಉದಾಸೀನತೆಯೆಂದು ತಿಳಿದುಕೊಳ್ಳಬೇಕು ಎಂದು ಅತಿ ವಿನಯದಿಂದ ಪ್ರಾರ್ಥನೆಮಾಡುತ್ತೇನೆ. ಶರಾವತಿ ಕಣಿವೆಯ ಒಂದು ಯೋಜನೆಯನ್ನು ದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚಿಸಬೇಕು, ಅದರಿಂದ ವಾಣಿಜ್ಯ ಕೈಗಾರಿಕೆ ಹಾಗೂ ವ್ಯವಸಾಯದ ಉತ್ಪನ್ನಗಳನ್ನು ಜಾಸ್ತಿಮಾಡಿ ರಾಜ್ಯದಲ್ಲಿ ನೆಮ್ಮದಿಯನ್ನುಂಟುಮಾಡಬೇಕು ಎಂಬ ಒಂದು ಧ್ಯೇಯದಿಂದ ತಯಾರಿಸಿದ್ದಾರೆ. ಆದರೆ ಸರ್ಕಾರದ ಒಂದು ಲೋಪದೋಷವೇನಿದೆಯೆಂಬುದನ್ನು ನಾನು ಹೇಳಬೇಕಾದರೆ ಕೆಲವು ಉದಾಹರಣೆಗಳನ್ನು ಕೊಡದಿದ್ದರೆ ಅದು ಅನಿವಾರ್ಯವೆಂದು ಕಾಣುತ್ತದೆ. ಸರ್ಕಾರದವರು ಬಹುಶಃ ಶ್ರದ್ಧೆಯಿಂದ ಮೊದಲನಿಂದಲೂ ಕೂಡ ಇದಕ್ಕೆ ಪ್ರಾಮುಖ್ಯತೆ ಕೊಟ್ಟು ಒತ್ತಾಯಮಾಡಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು; ಪ್ಲಾನಿಂಗ್ ಕಮಿಷನ್‌ನವರು ತಮ್ಮಷ್ಟಕ್ಕೆ ತಾವೇ ಶರಾವತಿ ಯೋಜನೆಯನ್ನು ಯಾವುದೋ ಒಂದು ಕೋರ್‌ನಲ್ಲೋ ಅಥವಾ ಪಿಕ್ ಆಫ್ ದಿ ಪ್ಲಾನ್‌ನಲ್ಲೋ ಸೇರಿಸಿದ್ದಾರೆ. ಮೈಸೂರು ದೇಶ ಈಸ್ಟರ್ನ್ ಕಂಟ್ರೀಸ್‌ನಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದರಲ್ಲಿ ಸ್ವಲ್ಪ ಹೆಸರುವಾಸಿಯಾಗಿದೆ. 1898 ರಲ್ಲೇ

ಹೈಡ್ರೋ ಎಲೆಕ್ಟ್ರಿಕ್ ಸ್ಟೇಷನ್ ಪ್ರಾರಂಭಿಸಿ 1902ರಲ್ಲಿ ಸರ್ವಿಸ್‌ಕೊಟ್ಟರು. 1904ರಲ್ಲಿ ಇಡೀ ವಿಶ್ವದಲ್ಲೇ ಪ್ರಾಮುಖ್ಯವಾದ ಒಂದು ಹೈಡ್ರೋ ಎಲೆಕ್ಟ್ರಿಕ್ ಇನ್‌ಸ್ಟಲೇಷನ್ ನಯಾಗರ ಫಾಲ್ಸ್‌ನಲ್ಲಿ ಮುಂದುವರಿಸಿದರು. ಆಗ್ಗೆ ಮೈಸೂರು ದೇಶದ ವಿದ್ಯುಚ್ಛಕ್ತಿಯ ಉತ್ಪನ್ನ ಎಷ್ಟು ಮುಂದುವರಿದಿತ್ತೆಂದು ಚರಿತ್ರೆ ತೆಗೆದು ನೋಡಿದರೆ ತಿಳಿಯುತ್ತದೆ. ಕೆ. ಜಿ. ಎಫ್.ಗೆ ಸುಮಾರು 86 ಮೈಲಿ ದೂರದಿಂದ ಹೈಟೆನ್ಷನ್ ಪವರ್ ಸರಬರಾಯಿಮಾಡುತ್ತಿತ್ತು. ಈಚೀಚೆಗೆ ಅಕ್ಕಪಕ್ಕಗಳಲ್ಲಿರುವ ರಾಜ್ಯಗಳಲ್ಲಿ ಉತ್ಪಾದನೆ ಜಾಸ್ತಿಯಾಗುತ್ತಿರುವಾಗ ಮೈಸೂರು ದೇಶ ಹಿಂದೆ ಬೀಳುತ್ತಿರುವುದಕ್ಕೆ ಕಾರಣ ವಿದ್ಯುಚ್ಛಕ್ತಿ ಉತ್ಪತ್ತಿಗೆ ಇಲ್ಲಿ ಸಾಕಷ್ಟು ಪ್ರಾಮುಖ್ಯತೆ ಪ್ರೋತ್ಸಾಹ- ಸೌಲಭ್ಯ ಕೊಡದಿರುವುದು. ಇನ್ನೊಂದು ಬಲವಾದ ಕಾರಣವೇನೆಂದರೆ, ಬಹುಶಃ ಪ್ರಜೆಗಳ ಪ್ರತಿನಿಧಿಗಳಾದ ಈ ಸಭಾ ಸದಸ್ಯರು ದೇಶದ ಆಗು ಹೋಗುಗಳ ಮತ್ತು ಜನತೆಯ ಆಗುಹೋಗುಗಳ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಒಂದು ಕಾನೂನು ಮಾಡಿ ಅವರ ಸುಖಸಂಪತ್ತುಗಳ ಬಗ್ಗೆ ಆಶ್ವಾಸನ ನೀಡಿ ಇಲ್ಲಿಗೆ ಬಂದು ಪ್ರಜಾ ಪ್ರಭುತ್ವದ ಪ್ರಕಾರ ಸರ್ಕಾರ ರಚಿಸಿರುವ ಮಾನ್ಯ ಕಾಂಗ್ರೆಸ್ ಪಕ್ಷದವರು ಜನರ ಹಿತವನ್ನು ಸಾಧನೆ ಮಾಡಿಲ್ಲದಿರುವುದು ಎಂದು ಹೇಳಿದರೆ ಅದನ್ನು ಅಪಾದನೆಯೆಂದು ತಪ್ಪು ತಿಳಿದುಕೊಳ್ಳಬಾರದು. ಒಂದೇ ಒಂದು ಉದಾಹರಣೆ ಕೊಟ್ಟರೆ ಬಹುಶಃ ಜನರಿಗೆ ಮತ್ತು ಮಾನ್ಯ ಸದಸ್ಯರಿಗೆ ಮನದಟ್ಟಾಗುತ್ತದೆ. 1942ನೆಯ ಇಸವಿಯಿಂದಲೂ ಕೂಡ ಆಹಾರವನ್ನು ಉತ್ಪನ್ನ ಮಾಡುತ್ತೇವೆಂದು ಹೇಳುತ್ತಿರುವ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಮುಂದುವರಿದಿದ್ದಾರೆಂಬುದನ್ನು ನೋಡಿದರೆ ಖಂಡಿತವಾಗಿಯೂ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಆಹಾರದ ಉತ್ಪತ್ತಿಗೇನು ಸಾಮಗ್ರಿ ಬೇಕು ಗೊಬ್ಬರ ವಗೈರೆ. ಅದರ ಪೈಕಿ ಸರ್ಕಾರದ ಯೋಜನೆಗನುಸಾರವಾಗಿ ವಿದ್ಯುಚ್ಛಕ್ತಿಯು ಬಹಳ ಮುಖ್ಯವಾದುದು. ಸಾಕಷ್ಟು ವಿದ್ಯುಚ್ಛಕ್ತಿಯಿಲ್ಲದೆ ಆಹಾರದ ಅಭಾವ ಪರಿಸ್ಥಿತಿ ನಿವಾರಣೆ ಮಾಡುವುದು ದೊಡ್ಡ ಸಮಸ್ಯೆಯಾಗಿದೆ. ರಾಜ್ಯ ಸರ್ಕಾರದವರು ಹಾಗೂ ಮೈಸೂರು ದೇಶದ ಪ್ರತಿನಿಧಿಗಳು, ಪಾರ್ಲಿಮೆಂಟಿನಲ್ಲಿ ಈ ದೇಶವನ್ನು ಪ್ರತಿನಿಧಿಸುವ ಸದಸ್ಯರು ಎಷ್ಟುಮಟ್ಟಿಗೆ ಕೆಲವು ಯೋಜನೆಗಳನ್ನು ಸಾಧನೆಮಾಡಿದ್ದಾರೆ, ಪರಿಪೂರ್ಣಮಾಡಿದ್ದಾರೆ ಎಂದು ನೋಡಿದರೆ ಬಹಳ ಶೋಚನೀಯವಾಗಿದೆ. ಉದಾಹರಣೆಗೆ ಸತ್ಯಮಂಗಲ—ಚಾಮರಾಜನಗರ ರೈಲ್ವೆ, ಹಾಸನ-ಮಂಗಳೂರು ರೈಲ್ವೆ, ಹೇಮಾವತಿನದಿಗೆ ಅಡ್ಡಲಾಗಿ ನಿರ್ಮಿಸಬೇಕಾದ ಗೊರೂರು ಪ್ರಾಜೆಕ್ಟ್-ಈ ಯೋಜನೆಗಳು ಇನ್ನೂ ಕಾರ್ಯಗತವಾಗಿಲ್ಲ. ಇದಕ್ಕಾಗಿ ಬಹಳವಾಗಿ ಹೋರಾಡಿದ್ದೇವೆಂದು ಅಷ್ಟುಮಾತ್ರ ಹೇಳಿದರೆ ಸಾಲದು. ಏನು ಸಾಧನೆ ಮಾಡಿದೆಯೆಂಬುದು ಮುಖ್ಯವಾದುದು. ನಿನ್ನೆ ದಿವಸ ಪ್ರಧಾನ ಮಂತ್ರಿಗಳ ವಿಚಾರ ಶ್ರೀ ಮುಕ್ಕಣ್ಣಪ್ಪನವರು ಹೇಳುತ್ತಿದ್ದರು. ಅವರು ಬಹಳ ದೊಡ್ಡವರು, ಇಡೀ ವಿಶ್ವಕ್ಕೇ ಬಹಳ ದೊಡ್ಡ ವ್ಯಕ್ತಿ, ಸಂತೋಷ. ಆದರೆ ಈ ದಿವಸ ನಮಗೆ ಮುಖ್ಯವಾಗಿ ದೊರೆಯಬೇಕಾದ ಸಹಾಯ ದೊರೆತಿಲ್ಲ. ಮಗು ಅತ್ತ ಹೊರತು ಹಾಲು ಬರುವುದಿಲ್ಲವೆಂಬ ಗಾದೆಯಿದೆ. ಅದರಂತೆ ನಮ್ಮ ರಾಜ್ಯಸರ್ಕಾರ ಹಾಗೂ ಪಾರ್ಲಿಮೆಂಟ್ ಪ್ರತಿನಿಧಿಗಳು ಚೆನ್ನಾಗಿ ಹೋರಾಡಿ ಶರಾವತಿ ಯೋಜನೆಗೆ ತಕ್ಕ ಅವಕಾಶವನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ದೊರಕಿಸಿಕೊಂಡು ಕೋರ್‌ನಲ್ಲಿ ಸೇರಿಸುವಂತೆ ಮಾಡಲು ಸೂಕ್ತ ಕ್ರಮ ಕೈಕೊಳ್ಳಬೇಕಾಗಿತ್ತು. ಇಂದು ರಾಜ್ಯ ಸರ್ಕಾರದವರು ನಮ್ಮ ಯೋಜನೆ ಫಲಪ್ರದವಾಗಿ ಪರಿಪೂರ್ಣವಾಗುವ ವಿಚಾರದಲ್ಲಿ ಹಿಂದುಳಿದಿದ್ದಾರೆಂದರೆ ಅಪಾರ್ಥ ಮಾಡಿಕೊಳ್ಳಬಾರದು. ಅನೇಕ ತಜ್ಞರು ಹಾಗೂ ಈ ದೇಶದ ಎಂಜಿನಿಯರುಗಳು ಇನ್‌ವೆಸ್ಟಿಗೇಟ್ ಮಾಡಿರುವ ಪ್ರಕಾರ ಶರಾವತಿ ಯೋಜನೆಯು ಬಹಳ ಸಹಾಯಕಾರಿಯಾದುದೂ, ಮಿತವ್ಯಯದಿಂದ ಕೂಡಿದುದೂ ಆಗಿದೆ. ಆ ಪ್ರಕಾರ ಆಖೈರು ತೀರ್ಮಾನವಾಗಿ ಸಿದ್ಧಾಂತವಾಗಿದೆ. 1950ರಲ್ಲಿ ಪ್ಲಾನಿಂಗ್ ಕಮಿಷನ್ ರಚನೆಯಾಗಿರಬೇಕು. ಆ ಕಮಿಷನ್ನಿನವರು ಇಂಥ ಯೋಜನೆಗೆ ಪ್ರಾಮುಖ್ಯತೆ ಕೊಡಲಿಲ್ಲ. ಈ ದೇಶದ ಆಗುಹೋಗು ಏನಿದೆ, ಈ ದೇಶದ ಭೌಗೋಳಿಕ ಮತ್ತು ಚಾರಿತ್ರಿಕ ದೃಷ್ಟಿಯಿಂದ ಎಷ್ಟುಮಟ್ಟಿಗೆ ನಾವು ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎಂಬುದಕ್ಕೆ ಏಕೆ ಪ್ಲಾನಿಂಗ್ ಕಮಿಷನ್‌ನವರ ಗಮನವನ್ನು ಸೆಳೆದಿಲ್ಲ, ಅವರಲ್ಲಿ ಏಕೆ ಒತ್ತಾಯಮಾಡಲಿಲ್ಲ ಎಂದು ಕೇಳಬೇಕಾಗಿದೆ. ಈ ಸಂದರ್ಭದಲ್ಲಿ ಶರಾವತಿಯ ಚರಿತ್ರೆಯನ್ನು ಸ್ವಲ್ಪ ಮಟ್ಟಿಗೆ ಹೇಳುತ್ತೇನೆ, ಲಂಬಿಸಿ ಹೇಳುವುದಿಲ್ಲ.

[MR. DEPUTY SPEAKER in the Chair]

ಇದೊಂದು ಪವಿತ್ರವಾದ ವರ ಎಂದು ಹೇಳಿದರೆ ಅದು ತಪ್ಪಾಗಲಾರದು. ಅಂಬುತೀರ್ಥವೆಂಬ ಬೆಟ್ಟದ ಪ್ರದೇಶದಲ್ಲಿ ಶರಾವತಿ ನದಿಯು ಹರಿದು ವಿದ್ಯುಚ್ಛಕ್ತಿ ಉತ್ಪಾದನೆಗೆ ಸಹಾಯಕವಾಗಿ ಜನತೆಯ ಭವಿಷ್ಯವನ್ನು ಉತ್ತಮಪಡಿಸತಕ್ಕಂಥ ಈ ಶರಾವತಿ ಯೋಜನೆಯು ದೇವರ ಒಂದು ವರ ಆಗಿದೆ ಪ್ರಕೃತಿಯು ಕೊಟ್ಟಿರತಕ್ಕ ಇಂಥ ಸುಂದರವಾದ ವರವನ್ನು ಜನತೆಯ ಹಿತಕ್ಕಾಗಿ ಉಪಯೋಗಿಸುವುದಕ್ಕೆ ಪ್ರಯತ್ನ ಮಾಡದಿದ್ದರೆ ಏನು ಪ್ರಯೋಜನ? ತೆರಿಗೆಯ ರೂಪದಲ್ಲಿ ಜನತೆಯಿಂದ ದುಡ್ಡು ತೆಗೆದುಕೊಳ್ಳಲಿಕ್ಕೆ ನೀವು ಪ್ರಯತ್ನ ಮಾಡುತ್ತೀರಿ. ಆದರೆ ಜನತೆಗೆ ಸೌಲಭ್ಯಗಳನ್ನು ಒದಗಿಸಿಕೊಡಲು ಮಾತ್ರ ಪ್ರಯತ್ನ ಮಾಡುವುದಿಲ್ಲ. ನಾವು ಹೀಗೆ ಬಿಚ್ಚು ಮನಸ್ಸಿನಿಂದ ಹೇಳಿದರೆ ಅದನ್ನು ತಪ್ಪು ಅರ್ಥಮಾಡಿಕೊಳ್ಳುತ್ತೀರಿ. ಈ ಶರಾವತಿಯ ಯೋಜನೆಯ ವಿಷಯದಲ್ಲಿ ರಾಜ್ಯಸರ್ಕಾರ ಮತ್ತು ಕೇಂದ್ರ ಸರಕಾರ ಈ ಕೆಲಸವನ್ನು ನಿರ್ವಹಿಸಬೇಕಾಗಿತ್ತು. ಸರಿಯಾದ ವೇಳೆಯಲ್ಲಿ ಈ ಠರಾವನ್ನು ಸಭೆಯಮುಂದೆ ತಂದಿದ್ದಾರೆ. ಈ ಠರಾವಿಗೆ ಯಾರದೂ ವಿರೋಧವಿಲ್ಲ. ಸುಮ್ಮನೆ ಈ ಠರಾವನ್ನು ಪಾಸ್‌ಮಾಡಿ ಕೇಂದ್ರ ಸರಕಾರಕ್ಕೆ ಕಳಿಸಿಕೊಟ್ಟರೆ ಏನೂ ಆಗುವುದಿಲ್ಲ. ಆದುದರಿಂದ ಈ ಸಭೆಯು ಅಂಗೀಕರಿಸಿದ ನಿರ್ಣಯವನ್ನು ತೆಗೆದುಕೊಂಡುಹೋಗಿ ಕೇಂದ್ರ ಸರ್ಕಾರದೊಡನೆ ಸಮಾಲೋಚನೆಮಾಡಿ ಪ್ಲಾನಿಂಗ್ ಕಮಿಷನ್ ಸದಸ್ಯರೊಡನೆ ವಿಚಾರ ವಿನಿಮಯಮಾಡಿ ಜಾಗ್ರತೆ ಈ ಕೆಲಸ ಆಗುವಹಾಗೆ ಮಾಡಬೇಕು. ವಿದ್ಯುಚ್ಛಕ್ತಿಯ ಉತ್ಪಾದನೆಯ ಮತ್ತು ಕೈಗಾರಿಕೆಯ ವಿಚಾರದಲ್ಲಿ ನಮ್ಮ ಮೈಸೂರು ಸಂಸ್ಥಾನವು ಇಂದು 25 ವರ್ಷಗಳಷ್ಟು ಹಿಂದೆ ಉಳಿದಿದೆ. ವಿದ್ಯುಚ್ಛಕ್ತಿಯ ಅಭಾವವೇ ಇದಕ್ಕೆ ಕಾರಣ. ಸರಿಯಾದ ರೀತಿಯಲ್ಲಿ ಪ್ರಯತ್ನ ನಡೆದಿದ್ದರೆ ನಾವು ಪ್ರಯೋಜನ ಹೊಂದಬಹುದಾಗಿತ್ತು. ಈಗಲಾದರೂ ಎಚ್ಚತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಹಾಗೆಮಾಡಿ ಕೈಗಾರಿಕೆಗಳು ಅಭಿವೃದ್ಧಿಯಾಗುವುದಕ್ಕೆ ಪ್ರಯತ್ನಮಾಡಬೇಕು. ನಮ್ಮ ರಾಜ್ಯದಲ್ಲಿ ಲೋಹಕಬ್ಬಿಣ ಮತ್ತು ಅದುರು ಬೇಕಾದಷ್ಟು ಸಿಕ್ಕುತ್ತದೆ ಇದಕ್ಕೆಲ್ಲಾ ವಿದ್ಯುಚ್ಛಕ್ತಿಯು ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಕೈಗಾರಿಕಾ ರಂಗದಲ್ಲಿ ತೃಪ್ತಿಕರವಾಗಿ ಕೆಲಸ

(ಶ್ರೀ ವೈ. ವೀರಪ್ಪ)

ಸಾಧನೆ ಮಾಡಬೇಕಾದರೆ ಈ ವಿದ್ಯುಚ್ಛಕ್ತಿಯು ಬೇಕು. ಬೇರೆ ಕಡೆಗಳಲ್ಲಿ ಅನೇಕ ಯೋಜನೆಗಳಿಗಾಗಿ ಸರಕಾರದವರು ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದಾರೆ. ಆದಕಾರಣ ಈ ಶರಾವತಿ ಯೋಜನೆಯನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕು. ಈ ಯೋಜನೆ ಪೂರ್ತಿಆದಮೇಲೆ ಒಂದು ಕಿಲೋವ್ಯಾಟಿಗೆ 538 ರೂಪಾಯಿ ಖರ್ಚುಆಗಬಹುದು ಎಂದು ಅಂದಾಜು ಮಾಡಲಾಗಿದೆ. ಬೇರೆ ರೀತಿಯಲ್ಲಿ ಪಾವರ್ ಜೆನರೇಟ್ ಮಾಡುವುದಕ್ಕೆ ಹೆಚು ಖರ್ಚು ಆಗುತ್ತದೆ. ಈ ಶರಾವತಿ ಯೋಜನೆಗೆ ಪ್ರಕೃತಿ ಸೌಲಭ್ಯವಿರುವುದರಿಂದ ಬಹಳ ಕಡಮೆ ಖರ್ಚು ಆಗುತ್ತದೆ. ಈ ಶರಾವತಿ ನಧಿಯಲ್ಲಿ ಅವಿಚ್ಛಿನ್ನವಾಗಿ ಐದು ಸಾವಿರ ಕ್ಯೂಸೆಕ್ಸ್ ನೀರು ಹರಿಯುತ್ತದೆ. ಇಲ್ಲಿ ಬಹಳ ಅನುಕೂಲವಾದ ಸೌಲಭ್ಯ ಎದೆ. ಆದಕಾರಣ ಕೇಂದ್ರ ಸರಕಾರದಮೇಲೆ ಒತ್ತಾಯಮಾಡಿ ಇದನ್ನು ಖಂಡಿತವಾಗಿ ಮಾಡಿಕೊಡಬೇಕೆಂದು ಹೇಳಬೇಕು. ಕೇಂದ್ರ ಸರಕಾರದವರು ಯೋಜನೆಯನ್ನು ಫಲದಾಯ ದೃಷ್ಟಿಯಿಂದ ಮಾಡುತ್ತಾರೆ. ಸರಿಯಾದ ರೀತಿಯಲ್ಲಿ ರಾಜ್ಯವಾಳುತ್ತಾ ಇಲ್ಲ. 'ಅಡಿಗೆ ಮಾಡಿದಮೇಲೆ ಒಲೆ ಉರಿಯಿತು, ಕೆಟ್ಟಮೇಲೆ ಬುದ್ಧಿಬಂದಿತು' ಎಂಬಹಾಗೆ ಜಡತ್ವ ಸ್ವಭಾವವನ್ನು ತಳೆದಿದ್ದಾರೆ. ಮೈಸೂರು ಸಂಸ್ಥಾನದಲ್ಲಿಯ ಯೋಜನೆಗಳಿಗೆ ಅವರು ಹೆಚ್ಚು ನಿಗಾ ಕೊಡುವಹಾಗೆ ಪ್ರಯತ್ನ ಮಾಡಬೇಕು. ಈ ಶರಾವತಿ ಯೋಜನೆಯು ಅತ್ಯವಶ್ಯಕವಾಗಿದೆ ಎಂಬುದನ್ನು ಅಂಕಿಅಂಶಗಳ ಆಧಾರದಮೇಲೆ ತೋರಿಸಬಹುದು. ಮೈಸೂರು ಸಂಸ್ಥಾನ ಪವರ್ ಡೆವಲಪ್‌ಮೆಂಟ್ ವಿಚಾರದಲ್ಲಿ ಮೊದಲಿನಿಂದಲೂ ಮುಂದುವರಿದಿದೆ. ಈಗ ರಾಜ್ಯ ದೊಡ್ಡದಾಗಿದೆ. ಎರಡು ಕೋಟಿ ಪ್ರಜಾ ಸಂಖ್ಯೆ ಇದೆ. ಇನ್ನು ಎಷ್ಟೋ ಯೋಜನೆಗಳನ್ನು ಮಾಡಬಹುದು. ಆಹಾರ ಅಭಾವವನ್ನು ತಡೆಯುವುದಕ್ಕೂ, ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೂ ಕೈಗಾರಿಕೋದ್ಯೋಮಗಳನ್ನು ಉತ್ತಮಪಡಿಸುವುದಕ್ಕೂ ಈ ಶರಾವತಿ ಯೋಜನೆ ಅತ್ಯವಶ್ಯಕವಾಗಿದೆ ಎಂದು ಅನೇಕರು ಹೇಳಿದ್ದಾರೆ. ಸದ್ಯಕ್ಕೆ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯ ಕೊರತೆ ಇದೆ. ಈ ವಿದ್ಯುಚ್ಛಕ್ತಿಯ ಅಭಾವದ ಮೂಲಕ ಕೈಗಾರಿಕೆಗಳ ಅಭಿವೃದ್ಧಿಪಡಿಸುವುದು ಸಾಧ್ಯವಾಗಿಲ್ಲ. ಕೇವಲ ಕೈಗಾರಿಕೆಗಳ ಬಗ್ಗೆ ರಿಪೋರ್ಟುಗಳನ್ನು ಅಚ್ಚುಮಾಡಿ ಹಂಚಿದರೆ ಅಭಿವೃದ್ಧಿಯಾಗುವುದಿಲ್ಲ. ಜನತೆಗೆ ಈಗ ಮುಖ್ಯವಾಗಿ ಬೇಕಾದುದು ವಿದ್ಯುಚ್ಛಕ್ತಿ ಅದರ ಅಭಾವದಿಂದ ದಿನೇದಿನೇ ಕೈಗಾರಿಕೆಗಳು ಕ್ಷೀಣವಾಗುತ್ತಿವೆ. ಇದಕ್ಕೆಲ್ಲಾ ನಮ್ಮ ಔದಾಸೀನ್ಯವೇ ಕಾರಣ. ಎರಡನೆಯ ಪಂಚವಾರ್ಷಿಕ ಯೋಜನೆಯ ವಿಚಾರದಲ್ಲಿ ನಮ್ಮ ಉದಾಸೀನ ಭಾವನೆ ಅನೇಕ ರೀತಿಯಲ್ಲಿದೆ. ಆಹಾರ ಅಭಾವದ ಬಗ್ಗೆ ಫುಡ್ ಡಿಬೇಟ್ ಆಗುವುದು ಇದೆ.

